## ಸಂಕೇತಿ ಯಾತ್ರಾ ಕೇಂದ್ರ, ವಾರಾಣಸಿ

ಸಂಕೇತಿಗಳ ಯಾತ್ರಾ ಅನುಕೂಲಕ್ಕಾಗಿ ವಾರಾಣಸಿಯಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಿ ಕಾಶಿ, ಗಯಾ ಹಾಗೂ ಪ್ರಯಾಗ ಯಾತ್ರೆಗೆ ಹೋಗುವವರಿಗೆ ಸುಸಜ್ಜಿತವಾದ ವಸತಿ ಊಟ ಹಾಗೂ ವೈದಿಕ ಕಾರ್ಯಗಳಿಗೆ ಸಂಕೇತಿ ಪುರೋಹಿತರ ವ್ಯವಸ್ಥೆಯನ್ನು ಅತ್ಯಂತ ಸೂಕ್ತ ದರದಲ್ಲಿ ಏರ್ಪಡಿಸಲಾಗಿದೆ. ಪ್ರವಾಸ ಹೊರಡುವವರು ಈ ಕೆಳಕಂಡ ಕಾರ್ಯಕರ್ತರನ್ನು ಸಂಪರ್ಕಿಸಿ ತಮ್ಮ ಯಾತ್ರೆಯನ್ನು ಅತ್ಯಂತ ತೃಪ್ತಿದಾಯಕವನ್ನಾಗಿಸಿಕೊಳ್ಳಲು ಕೋರಿದೆ.

| ವಾರಾಣಸಿ ನಾಗೇಶ್ | ಬೆಂಗಳೂರು |
|---|---|
| 09452 417813 | ಹೆಚ್.ಎನ್.ಲಕ್ಷ್ಮೀಕಾಂತಯ್ಯ - 98450 30997 |
| 099454 92750 | ಸಿ. ಕೆ. ಮಂಜುನಾಥ್ - 99800 15111 |

***With Best Compliments From :***

# K. VILASINI

## Bajaj Allianz Life Insurance

**Small Investment More Profit**

**Earn Monthly Rs. 600/- to 1 Lakh**

***Further Details Contact :***

**Co-ordinator**

**Vilasini. K** **N. Vijay**

**9844507039** **9739436901**

**No. 3, Ranganatha Building,**
**Near Stephen School, Jalahalli West,**
**K. G. Halli, Bangalore - 560 015**





# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ವಿರೋಧಿನಾಮ ಸಂ|| ಮಾರ್ಗಶಿರ ಮಾಸ ಸಂಪುಟ - ೨೪

ಡಿಸೆಂಬರ್ ೨೦೦೯ ಸಂಚಿಕೆ - ೧೨


# The path of devotion

One of the methods advocated by the Bhagavad Gita to achieve salvation and enlightenment is the path of devotion (Bhakti Marga). This path is open to every human being, irrespective of his status or learning. True devotion, devoid of hypocrisy and desires is all that the lord expects. Many great saints like Tukaram, Namdev, Chaitanya Mahaprabhu and Meerabai took to this mode of worship in north India, while down south Alwar Saints, Haridasas, Andal and others followed the same path in the form of extolling the virtues of the lord.

One of the greatest followers of the Bhakti *Marga* in the south was saint Thyagaraja, who lived during the early part of the 18th century in Tiruvaiyaru on the banks of the river Cauvery in Tanjavur district of Tamil Nadu. Thyagarajaswami’s life is a divine saga of devotion and service to Lord Sri Rama. To him, Lord Rama was not just a mythological character or just an icon to be worshipped, but the very embodiment of all virtues and qualities desirable in one born on this earth.

This mode of worship took the form of composing songs. He composed thousands of songs, which form the core of classical Carnatic music. The common thread running through all these songs is pure devotion. To him,

Bhakti was more important than engaging in theoretical arguments. In his famous song "Chakkanirajamargamulundaga" he wonders at man's folly in taking narrow and devious paths when the road to bliss is wide open right in front of him. Refusing the offer of riches from the King of Thanjavur to come to his court, he prefers the ineffable joy of service at the feet of the Lord to the bondage of singing praises of a mere human in his song "Nidhi Chala Sukhama Ramuni Sannidhi Seva Sukhama".

"Many are great souls, who have graced this earth. My prostrations to all of them" said this humble wandering bard, who attained immortal bliss on the Pushya Bahula Panchami, which falls in the month of January. The day is observed as the "Aradhana" Day, when musicians, music lovers and the devout assemble at his Samadhi at Tiruvaiyaru to pay their homage to this "Rama Bhakta Shiromani". To this day, his Samadhi is a place of piligrimage not only to musicians, but to all of those who desire to partake of the nectar of Rama Bhakti.

***

## *Change of Address*

**S. C. Manjunatha**
**Sandhya**

No. 30, Thulaja Bhavani Nilaya, 1st Floor, 13th Main,
Motappa Garden, Raghavendra Extn., Hosakerehalli,
Bangalore - 560 085.
Ph : 2642 6502, 97319 88788





## 2009 - 2011ನೇ ಸಾಲಿನ ಕಾರ್ಯಕಾರಿ ಸಮಿತಿಯ ಚುನಾವಣೆಯಲ್ಲಿ ಅವಿರೋಧವಾಗಿ ಚುನಾಯಿತರಾದ ಸದಸ್ಯರು

| | | |
|---|---|---|
| 1. | ಬಾಲಸುಬ್ರಹ್ಮಣ್ಯ ಹೆಚ್. ಕೆ. | ಮೈಸೂರು |
| 2. | ಚಂದ್ರಶೇಖರ್ ಹೆಚ್.ವಿ. | ಬೆಂಗಳೂರು |
| 3. | ಮಂಜುನಾಥ್ ಹೆಚ್.ಎನ್. | ಬೆಂಗಳೂರು |
| 4. | ಮುರಳೀಧರ್. ಹೆಚ್.ಎನ್. | ಬೆಂಗಳೂರು |
| 5. | ನರಸಿಂಹನ್. ಎಂ. | ಬೆಂಗಳೂರು |
| 6. | ಸತೀಶ್ಚಂದ್ರ ಬಿ. ವಿ. | ಬೆಂಗಳೂರು |
| 7. | ಶ್ರೀಕಂಠನ್ ಎಂ. ಆರ್. | ಮೈಸೂರು |
| 8. | ಸುರೇಶ್ ಎಂ. ಎನ್. ಡಾ॥ | ಮೈಸೂರು |
| 9. | ಸುರೇಶ್ ಎಂ. ಕೆ. | ಮೈಸೂರು |
| 10. | ವಸಂತಲಕ್ಷ್ಮೀ. ಆರ್. ವಿ. | ಮೈಸೂರು |
| 11. | ಉಮೇಶ್. ಹೆಚ್. ಎನ್. | ಮೈಸೂರು |



# ಅಧ್ಯಕ್ಷ ನುಡಿ

ಸಂಘದ 63ನೇ ವಾರ್ಷಿಕ ಸರ್ವಸದಸ್ಯರ ಸಭೆಯು ಯಶಸ್ವಿಯಾಗಿ ನಡೆದಿದೆ. ಪರವಾಗಿಲ್ಲ ಅನ್ನುವಷ್ಟು ಸಂಖ್ಯೆಯಲ್ಲಿ ಸದಸ್ಯರು ಭಾಗವಹಿಸಿದ್ದರು. ಕಲಾಪಗಳು ಸುಸೂತ್ರವಾಗಿ ಜರುಗಿದವು. ಅವಿರೋಧವಾಗಿ ಕಾರ್ಯಕಾರಿ ಸಮಿತಿಯ ಆಯ್ಕೆ ಮತ್ತೆರಡು ವರ್ಷಗಳಿಗೆ ಆಗಿದೆ. ನಂತರ ನಡೆದ ಸಭೆಯಲ್ಲಿ ನನ್ನನ್ನು ಮತ್ತೊಮ್ಮೆ ಅಧ್ಯಕ್ಷ ಸ್ಥಾನದ ಗೌರವಕ್ಕೆ ಪಾತ್ರವನ್ನಾಗಿಸಿದ ಸಮಿತಿಯ ಎಲ್ಲ ಸದಸ್ಯರಿಗೂ ಹಾಗೂ ಒಟ್ಟಾರೆ ಬಾಂಧವರೆಲ್ಲರಿಗೂ ಧನ್ಯವಾದಗಳನ್ನು ಹೇಳುತ್ತ ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಲು ತಮ್ಮೆಲ್ಲರ ಸಂಪೂರ್ಣ ಸಹಕಾರ ಹಾಗೂ ಹಾರೈಕೆಗಳನ್ನು ಬಯಸುತ್ತೇನೆ.

ಸರ್ವಸದಸ್ಯರ ಸಭೆಯಲ್ಲಿ ನೀಡಲಾಗುವ ಪ್ರತಿಭಾ ಪುರಸ್ಕಾರಕ್ಕೆ ಈ ಬಾರಿ 27 ವಿದ್ಯಾರ್ಥಿಗಳು ಅರ್ಹರಾಗಿದ್ದರು. ಮೈಸೂರಿನ ಯಾವ ವಿದ್ಯಾರ್ಥಿಯೂ ಬರಲಿಲ್ಲ; ಹಾಗೆಯೇ ಬೆಂಗಳೂರಿನ ಕೆಲವು ಪ್ರತಿಭಾವಂತ ವಿದ್ಯಾರ್ಥಿಗಳೂ ಹಾಜರಾಗಲಿಲ್ಲ. ಮುಂದಿನ ಸಲವಾದರೂ ಎಲ್ಲರೂ ತಪ್ಪದೇ ಬರುತ್ತಾರೆಂದು ಆಶಿಸೋಣ.

'ವಾರ್ತಾ'ದ ಕನ್ನಡ ಭಾಗಗಳನ್ನೆಲ್ಲ ಇಂಗ್ಲೀಷ್‌ನಲ್ಲೂ ನೀಡಬೇಕೆಂದು ಕೆಲವರು ಸಭೆಯಲ್ಲಿ ಸಲಹೆ ನೀಡಿದ್ದಾರೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಾಗಲಾರದು ಎಂದು ತಿಳಿಸುತ್ತ, ಕರ್ನಾಟಕದವರೇ ಆಗಿರುವ ಸಂಕೇತಿ ಬಾಂಧವರು ಕನ್ನಡವನ್ನು ಕಲಿಯುವುದು ಔಚಿತ್ಯಪೂರ್ಣ ಎಂದು ಹೇಳಲಿಚ್ಛಿಸುತ್ತೇನೆ.

ಸಂಕೇತಿ ಬಾಂಧವರ ಉದಾತ್ತ ಗುಣಗಳ ಪರಿಚಯವನ್ನು ನಾವು ಮಾಡಿಕೊಂಡೇ ಬರುತ್ತಿದ್ದೇವೆ. ಒಬ್ಬ ಅಪರೂಪ ಬಾಂಧವರು ರೂ. 1 ಲಕ್ಷದ ಬೃಹತ್ ಕೊಡುಗೆಯನ್ನು ನೀಡಿ ತಮ್ಮ ಹೆಸರನ್ನು ಪ್ರಕಟಿಸಬಾರದೆಂದು ಸೂಚನೆ ನೀಡಿದ್ದಾರೆ. ಶ್ರೀಯುತರಿಗೆ ಸಂಘದ ಹಾರ್ದಿಕ ಕೃತಜ್ಞತೆಗಳನ್ನು





ಸಲ್ಲಿಸುತ್ತ, ರೂ. 50,000/-ವನ್ನು ಅನ್ನದಾನ ನಿಧಿಗೂ ಮತ್ತು ರೂ. 50,000/-ವನ್ನು ಸಾಮಾನ್ಯ ವಿದ್ಯಾರ್ಥಿವೇತನ ನಿಧಿಗೆ ಸ್ವೀಕರಿಸಲಾಗಿದೆ ಎಂದು ತಿಳಿಸುತ್ತಿದ್ದೇನೆ.

ವೃದ್ಧಾಶ್ರಮ ಬಹುಶಃ ಬರುವ ಜನವರಿಯಲ್ಲಿ ಪ್ರಾರಂಭವಾಗುವ ನಿರೀಕ್ಷೆಯಿದೆ. ಕೊಡುಗೆಗಳು ಬರುತ್ತಿವೆ. ಕೆಲವರು ಪಾತ್ರೆಗಳನ್ನು ನೀಡಿದ್ದಾರೆ. ವೃದ್ಧಾಶ್ರಮಕ್ಕೆ ಸೇರಲು ಬಯಸುವವರು ನೀಡಬೇಕಾದ ದಾಖಲಾತಿ ಅರ್ಜಿಪತ್ರ, ಹಾಗೂ ನಿಯಮಾವಳಿಗಳನ್ನು ಕಳೆದ ಸಂಚಿಕೆಯಿಂದ 'ವಾರ್ತಾ'ದಲ್ಲಿ ಪ್ರಕಟಿಸುತ್ತಿದ್ದೇವೆ. ಆಸಕ್ತರು ವಿವರಗಳಿಗಾಗಿ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಸಂಪರ್ಕಿಸಬಹುದು.

ಯಾವುದೇ ಸ್ವಯಂ ಸೇವಾ ಸಂಘವು ಕಾರ್ಯ ನಿರ್ವಹಿಸಲು ಪ್ರೋತ್ಸಾಹ, ಉತ್ತೇಜನಗಳು ಬೇಕು. 'ವಾರ್ತಾ'ದ ಬಗ್ಗೆಯಾಗಲೀ ಸಂಘದ ಚಟುವಟಿಕೆಗಳ ಬಗ್ಗೆಯಾಗಲೀ ಬಾಂಧವರು ತಮ್ಮ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ನೀಡಿ ಸಂಘದ ಕ್ರಿಯಾತ್ಮಕ ಬೆಳವಣಿಗೆಗೆ ನೆರವಾಗಬೇಕೆಂದು ವಿನಂತಿಸುತ್ತೇನೆ.

– ಎಂ. ನರಸಿಂಹನ್

## ಪುಸ್ತಕ ಪ್ರಕಟನೆ

ನಮ್ಮ ಸಂಘದ ಹಿರಿಯ ಸದಸ್ಯರಾದ ಶ್ರೀ ಬಿ. ಎನ್. ಶ್ರೀಕಂಠಯ್ಯ ನಂ. 103/15, 12ನೇ ಮುಖ್ಯರಸ್ತೆ, 50 ಅಡಿ ರಸ್ತೆ, ಹನುಮಂತನಗರ, ಬೆಂಗಳೂರು - 50 ದೂರವಾಣಿ : 26605485 ಇವರು ಸಂಯೋಜಿಸಿದ (1) ವೇದಮಂತ್ರ ಸಂಕೀರ್ಣ (ಮೌಲ್ಯ ರೂ. 125/-) ಮತ್ತು (2) ಭಗವತ್ ಪ್ರತಿಷ್ಠಾಮಯೂಖ ಶ್ರೀರಾಮ ಪಟ್ಟಾಭಿಷೇಕ, ಗಿರಿಜಾ ಕಲ್ಯಾಣ ಸಹಿತ (ಬೆಲೆ ರೂ. 150/-) ಪುಸ್ತಕಗಳನ್ನು ಬಸವನಗುಡಿ ದೊಡ್ಡ ಬಸವಣ್ಣ ಗುಡಿ ರಸ್ತೆಯಲ್ಲಿರುವ ಪ್ರಚೇತ ಬುಕ್ ಹೌಸ್‌ನವರು (ದೂರವಾಣಿ : 9448505732) ಪ್ರಕಟಿಸಿದ್ದಾರೆ. ಇವು ಪುರೋಹಿತ ವರ್ಗದವರಿಗೂ ಆಸ್ತಿಕ ಮಹಾಜನರಿಗೂ ಅತ್ಯಂತ ಉಪಯುಕ್ತ. ಆಸಕ್ತಿಯುಳ್ಳವರು ಪ್ರತಿಗಳನ್ನು ಲೇಖಕರಲ್ಲಿ ಅಥವಾ ಪ್ರಕಾಶಕರಲ್ಲಿ ಪಡೆಯಬಹುದು.



# ಕಾರ್ಯದರ್ಶಿ ಕಾಲಂ

ಸನ್ಮಾನ್ಯ ಸಂಕೇತಿ ಬಂಧುಗಳಿಗೆಲ್ಲಾ ನಮಸ್ಕಾರಗಳು.

ದಿನಾಂಕ 29.11.09ರಂದು ಸರ್ವಸದಸ್ಯರ ವಾರ್ಷಿಕ ಸಭೆಯು ನಡೆದುದು ತಮಗೆಲ್ಲರಿಗೂ ತಿಳಿದೇ ಇದೆ.

ಆ ದಿನ ನಮ್ಮ ಬಂಧುಗಳು ಹಲವಾರು ಖಾಸಗಿ ಸಮಾರಂಭಗಳಿದ್ದರೂ, ತಾವುಗಳು, ಸಂಘದ ಮೇಲೆ ಅಭಿಮಾನವಿರಿಸಿ ಭಾಗವಹಿಸಿದಿರಿ. ತಮಗೆಲ್ಲರಿಗೂ ನಮ್ಮ ಸಂಘದ ಪರವಾಗಿ ಮತ್ತು ಆಡಳಿತ ಸಮಿತಿ ಪರವಾಗಿ ನನ್ನ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಈ ಮೂಲಕ ಪ್ರಕಟಿಸುತ್ತಿದ್ದೇನೆ.

ಹಾಗೆಯೆ ನಮ್ಮ ಮೇಲೆ ಅತಿ ಹೆಚ್ಚಿನ ನಂಬುಗೆಯನ್ನು ಇರಿಸಿ ನಾವು ಮಂಡಿಸಿದ ವಾರ್ಷಿಕ ವರದಿ, ಲೆಕ್ಕ ಪತ್ರಗಳನ್ನು ಯಾವುದೇ ಚರ್ಚೆಯೂ ಇಲ್ಲದೆ ಒಪ್ಪಿಕೊಂಡಿರುತ್ತೀರಿ. ಇದು ತಾವುಗಳು ನಮ್ಮ ಮೇಲಿರಿಸಿರುವ ಅತ್ಯಂತ ವಿಶ್ವಾಸವನ್ನು ತೋರಿಸುವಂತೆಯೇ, ಈ ವಿಶ್ವಾಸಕ್ಕೆ ಚ್ಯುತಿ ಬಾರದಂತೆ ಸಂಘವನ್ನು ಅಭಿವೃದ್ಧಿಯ ಪಥದಲ್ಲಿ ತೆಗೆದುಕೊಂಡು ಹೋಗಬೇಕೆನ್ನುವ ನಮ್ಮ ಜವಾಬ್ದಾರಿಯನ್ನೂ , ಕಾಳಜಿಯನ್ನೂ , ಛಲವನ್ನೂ ಹೆಚ್ಚಿಸಿದೆ ಎಂದರೆ ತಪ್ಪಾಗಲಾರದು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ತಮಗೆಲ್ಲರಿಗೂ, ಸಂಘದ, ನಮ್ಮ ಜನಾಂಗದ, ಉಭಯ ಸಂಕೇತಿಗಳ, ಒಟ್ಟಾರೆ ಎಲ್ಲ ಬ್ರಾಹ್ಮಣರ ಹಿತದೃಷ್ಟಿಯಿಂದ ಮಾತನಾಡಿದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರಿಗೂ ಸಂಘವು ಆಭಾರಿಯಾಗಿದೆ.

ಜ್ಞಾನವೃದ್ಧರೂ, ವಯೋವೃದ್ಧರೂ ಆದ ಶ್ರೀ ಬಿ. ಎನ್. ಶ್ರೀಕಂಠಯ್ಯನವರ ಬಗ್ಗೆ ಇಲ್ಲಿ ಬರೆಯದಿದ್ದರೆ ಈ ಕಾಲಂ ಪೂರ್ಣವಾಗುವುದಿಲ್ಲ. ಬಹಳ ಉತ್ಸಾಹದಿಂದ, ಈ ಕಾರ್ಯಕ್ರಮವನ್ನು ನಾನು ನಡೆಸಿಕೊಡುತ್ತೇನೆಂದು ಹೇಳಿ, ಬಹಳ ಅಚ್ಚುಕಟ್ಟಾಗಿ, ಇತರರಿಗೆ ಮಾದರಿಯಾಗಿ ಕಾರ್ಯಕ್ರಮವನ್ನು ನಡೆಸಿಕೊಟ್ಟಿರುತ್ತಾರೆ. ಅವರ ಶಕ್ತಿ ಜ್ಞಾನ ತಿಳುವಳಿಕೆಯಲ್ಲಿ ಸ್ವಲ್ಪವಾದರೂ ನಮಗೂ ಬರಲಿ ಎಂದು ಆಶಿಸುತ್ತಾ, ದೇವರು ಶ್ರೀಯುತರಿಗೆ ಹೆಚ್ಚಿನ ಆಯುರಾರೋಗ್ಯ-ಐಶ್ವರ್ಯಗಳನ್ನು ನೀಡಿ ಅವರಿಂದ ನಮ್ಮ ಸಮಾಜಕ್ಕೆ ಇನ್ನೂ ಹೆಚ್ಚಿನ ಸೇವೆ ಸಿಗುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ.





ಕಡೆಯದಾಗಿ ಭೋಜನದ ವಿಷಯದಲ್ಲಿ ಕೆಲವರಿಗೆ ಮನಸ್ಸಿಗೆ ನೋವಾಗಿರುವುದು ತಿಳಿಯಿತು. ಇದಕ್ಕಾಗಿ ನಮ್ಮ ಸಮಿತಿಯ ಪರವಾಗಿ ನಾನು ನಿಮ್ಮೆಲ್ಲರ ಕ್ಷಮೆ ಯಾಚಿಸುತ್ತಾ ಈ ಕಾಲಂ ಮುಗಿಸುತ್ತಿದ್ದೇನೆ. ಧನ್ಯವಾದಗಳು.

– ಎಸ್. ಸಿ. ಮಂಜುನಾಥ್

# ಮಿಲನ ಸಭೆ

**ದಿನಾಂಕ 27.12.2009ರ ಭಾನುವಾರ ಬೆಳಿಗ್ಗೆ 11.30ಕ್ಕೆ, 2009-11ರ ಸಾಲಿನ ನೂತನ ಕಾರ್ಯಕಾರಿ ಸಮಿತಿಯ ಸದಸ್ಯರೊಂದಿಗೆ ಪರಿಚಯ ಹಾಗೂ ಮಿಲನ ಸಭೆಯನ್ನು ಏರ್ಪಡಿಸಿದೆ.**

ಸ್ಥಳ : ಮೈಸೂರಿನ ನಮ್ಮ ಸಮುದಾಯ ಭವನದ ಸಭಾಂಗಣ

ಈ ಕಾರ್ಯಕ್ರಮದಲ್ಲಿ ಮೈಸೂರಿನ ನಮ್ಮ ಬಾಂಧವರು ಹಾಗೂ ಗ್ರಾಮಾಂತರ – ಬೆಟ್ಟದಪುರ, ರುದ್ರಪಟ್ಟಣ, ಹನಸೋಗೆ, ಸಾಲಿಗ್ರಾಮ, ಕುಶಾಲನಗರ ಮತ್ತು ಇನ್ನಿತರ ಪ್ರದೇಶದ ಬಾಂಧವರೂ ಕೂಡ ಭಾಗವಹಿಸಿ ಸಂಘ ಮುಂದೆ ಕೈಗೊಳ್ಳುವ ಕೆಲಸಕಾರ್ಯಗಳಿಗೆ ನೆರವು ನೀಡುತ್ತೀರೆಂದು ನೂತನ ಸಮಿತಿ ಆಶಿಸುತ್ತದೆ.

ಸಭೆಯ ನಂತರ ‘‘ಔತಣ ಕೂಟ’’ ಏರ್ಪಡಿಸಿರುತ್ತದೆ.

ಕಾರ್ಯಕಾರಿ ಸಮಿತಿ

# ಶುಭ ಸಮಾಚಾರಗಳು

## ನಾಮಕರಣ :

| ತಾರೀಖು | |
|---|---|
| 27.11.09 | **ಚಿ॥ ತೇಜಸ್** |
| ಬೆಂಗಳೂರು | ಶ್ರೀಮತಿ ವಿದ್ಯಾ ಮತ್ತು ಶ್ರೀ ಕಿರಣ್ ಬಿ. ಜಿ. ಅವರ ಪುತ್ರ ಶ್ರೀಮತಿ ಸರೋಜಾರಾಜ್ ಮತ್ತು ದಿ॥ ಗುರುರಾಜ್ ಅವರ ಪೌತ್ರ ಶ್ರೀಮತಿ ಕೌಸಲ್ಯಾಬಾಯಿ ಮತ್ತು ದಿ॥ ರಾಜಾರಾಮರಾವ್ ಅವರ ಪ್ರಪೌತ್ರ |

## ಗೃಹಪ್ರವೇಶ :

| ತಾರೀಖು | |
|---|---|
| 28.11.09 | **ಶ್ರೀಮತಿ ಆರ್. ಎಸ್. ಉಮಾ** |
| ಬೆಂಗಳೂರು | ವಾಜರಹಳ್ಳಿ |
| 29.11.09 | **ಶ್ರೀಮತಿ ಲಲಿತ ಮತ್ತು ಹೆಚ್.ಎಸ್. ಮನೋಹರ್ ಹಾಗೂ** |
| ಬೆಂಗಳೂರು | **ಶ್ರೀಮತಿ ಮಾಲಿನಿ ಮತ್ತು ಹೆಚ್.ಎಂ. ಸಂಜಯ್,** ಜೆ. ಪಿ. ನಗರ (ದಿ॥ ಹರವೆ ಶ್ರೀನಿವಾಸಯ್ಯನವರ ಮಕ್ಕಳು ಮತ್ತು ಮೊಮ್ಮಕ್ಕಳು) |

## ವಿವಾಹ ಮಹೋತ್ಸವ :

| ತಾರೀಖು | ವಧು | ವರ |
|---|---|---|
| 22.11.09 ಬೆಂಗಳೂರು | **ಚಿ॥ಸೌ॥ ರೇಶ್ಮಾ** (ಶ್ರೀಮತಿ ರಂಜಿನಿಭಟ್ ಮತ್ತು ದಿ॥ ರಮೇಶ್‌ಭಟ್‌ಅವರ ಪುತ್ರಿ) | **ಚಿ॥ರಾ॥ ಗುರುಪ್ರಸಾದ್ ಹೆಚ್.ಕೆ.** (ದಿ॥ ರಾಮಲಕ್ಷ್ಮೀ (ಭಾಗ್ಯ) ಮತ್ತು ಶ್ರೀ ಕೇಶವಮೂರ್ತಿ ಅವರ ಪುತ್ರ) |
| 29.11.09 ಬೆಂಗಳೂರು | **ಚಿ॥ಸೌ॥ ಸ್ಮಿತಾ** (ಶ್ರೀಮತಿ ಶ್ಯಾಮಲಾ ಮತ್ತು ಶ್ರೀ ಬಿ.ಎಂ. ಪ್ರಸನ್ನ ಅವರ ಪುತ್ರಿ) | **ಚಿ॥ ರಾ॥ ತುಷಾರ** ಡಾ॥ ಕುಂಕುಂ ಮತ್ತು ಪ್ರೊ॥ ವಿನಯ್‌ಕುಮಾರ್‌ಶ್ರೀವಾಸ್ತವ ಅವರ ಪುತ್ರ) |





| ತಾರೀಖು | ವಧು | ವರ |
|---|---|---|
| 11.12.09 ಬೆಂಗಳೂರು | **ಚಿ॥ ಸೌ॥ ಕಾಂಚನಾ** (ಶ್ರೀಮತಿ ಶೈಲಜಾ ಮತ್ತು ಶ್ರೀ ಹೆಚ್.ಬಿ.ಪ್ರತಾಪ್ ಅವರ ಪುತ್ರಿ ಹಾಗೂ ಶ್ರೀಮತಿ ಚಂಪಕಮಾಲಾ ಮತ್ತು ದಿ॥ ಭಾಸ್ಕರ್ ಹೆಚ್.ಎಸ್. ಹಾಗೂ ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಆರ್.ಕೆ.ಎಸ್.ಕುಮಾರಸ್ವಾಮಿ ಅವರ ಪೌತ್ರಿ) | **ಚಿ॥ ರಾ॥ ಸತ್ಯದೀಪ್** ಶ್ರೀಮತಿ ಗಾಯಿತ್ರಿ ಮತ್ತು ದಿ॥ ಡಿ.ಕೆ.ಸುಬ್ರಹ್ಮಣ್ಯಂ ಅವರ ಪುತ್ರ) |

## ನವೆಂಬರ್ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100/-)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಬಾಲಸರಸ್ವತಿ. ಬಿ.ಎ. | ಬೆಂಗಳೂರು | 9331 | 2089 |
| ಸುಬ್ರಹ್ಮಣ್ಯ. ಬಿ.ಎ. (ಇ/ಮ ಬಿ.ಎಸ್.ಅಶ್ವತ್ಥನಾರಾಯಣ) | ಬೆಂಗಳೂರು | 9332 | 2090 |
| ಶೋಭನಾ ಸುಬ್ರಹ್ಮಣ್ಯ | ಬೆಂಗಳೂರು | 9333 | 2091 |
| ಗುರುಪ್ರಸಾದ್. ಎಸ್.ಎಲ್. | ಬೆಂಗಳೂರು | 9334 | 2092 |
| ಪ್ರಸನ್ನಲಕ್ಷ್ಮೀ. ಆರ್.ವಿ. | ಬೆಂಗಳೂರು | 9336 | 2093 |
| ಅವಿನಾಶ್. ಹೆಚ್.ಆರ್. | ಬೆಂಗಳೂರು | 9337 | 2094 |
| ನಿರ್ಮಲಾ ಸುರೇಶ್ | ಬೆಂಗಳೂರು | 9338 | 2095 |
| ಚಂದ್ರಕಾಂತ್.ಆರ್.ಎಸ್. | ಬೆಂಗಳೂರು | 9344 | 2097 |
| ಸುಧಾ ಚಂದ್ರಕಾಂತ್ | ಬೆಂಗಳೂರು | 9346 | 2098 |
| ವಿನಯ್ ಚಂದ್ರಕಾಂತ್ | ಬೆಂಗಳೂರು | 9347 | 2099 |
| ಸತ್ಯಲಕ್ಷ್ಮೀ. ಆರ್.ಎಲ್. | ಬೆಂಗಳೂರು | 9348 | 2100 |
| ಕಾಂಚನ್. ಎಸ್. ಗದ್ವಾಲ್ | ಬೆಂಗಳೂರು | 9352 | 2101 |
| ರಘುರಾಮ್. ಎಸ್.ಎಸ್. | ಬೆಂಗಳೂರು | 9356 | 2102 |
| ಶ್ವೇತ ರಘುರಾಮ್ | ಬೆಂಗಳೂರು | 9356 | 2103 |
| ಧೃತಿ ರಘುರಾಮ್ | ಬೆಂಗಳೂರು | 9356 | 2104 |

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ರಾಜೀವ. ಎಸ್.ಎಸ್. | ಬೆಂಗಳೂರು | 9357 | 2105 |
| ಸುಮತಿ | ಬೆಂಗಳೂರು | 9359 | 2106 |
| ರವೀಶ. ಬಿ.ಆರ್. | ಮೈಸೂರು | 8964 | 2096 |

## ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ.ಎಸ್.ಅಶ್ವತ್ಥನಾರಾಯಣ | ಬೆಂಗಳೂರು | 9330 | 100.00 |
| | (ಸೊಸೆ ಶೋಭನಾ ಅವರ ಸೀಮಂತ 07.08.09) | | |
| ರಂಜಿನಿ ಭಟ್ | ಬೆಂಗಳೂರು | 9343 | 201.00 |
| | | | (ಮಗಳ ಮದುವೆ |

## ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ವಿಲಾಸಿನಿ. ಕೆ. ಮೂರ್ತಿ | ಬೆಂಗಳೂರು | 9328 | 150.00 |
| ಎಂ. ಎಸ್. ಶಶಿಧರ | ಹಾಸನ | 9329 | 100.00 |

## ಹಾಸ್ಟೆಲ್ ಅನ್ನದಾನ ನಿಧಿ / ಸೇವಾಗೆ ಬಂದ ಕೊಡುಗೆಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಇಂದಿರಾ ರಾಮಸ್ವಾಮಿ | ಮುಂಬಯಿ | 9339 | 50,300.00 |
| | (ಅತ್ತೆ-ಮಾವ ಮತ್ತು ತಂದೆ-ತಾಯಿಯರ ನೆನಪು) | | |
| ಆರ್.ಎಸ್.ಆನಂದರಾಮು | ಬೆಂಗಳೂರು | 9360 | 400.00 |
| | | | (ತಂದೆಯ ನೆನಪು) |
| ಆರ್.ಎಸ್.ಆನಂದರಾಮು | ಬೆಂಗಳೂರು | 9361 | 400.00 |
| | | | (ತಾಯಿಯ ನೆನಪು) |
| ಹೆಚ್.ಎಸ್.ಅನಂತರಾಮು | ಬೆಂಗಳೂರು | 9362 | 4,000.00 |
| | | | (ಪತ್ನಿಯ ನೆನಪು) |
| ಬಿ.ಎಸ್. ಸತ್ಯವತಿ | ಬೆಂಗಳೂರು | 9363 | 400.00 |
| | | | (ಮಾವನ ನೆನಪು) |
| ಬಿ.ಎಸ್. ಸತ್ಯವತಿ | ಬೆಂಗಳೂರು | 9364 | 400.00 |
| | | | (ಪತಿಯನೆನಪು) |





| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಎಸ್. ರಾಘವನ್ | ಮೈಸೂರು | 9036 | 500.00 |
| | | (ಮಾತಾಮಹಿ ಜ್ಞಾಪಕಾರ್ಥ) | |
| ಹೆಚ್.ಎಸ್. ರಾಘವನ್ | ಮೈಸೂರು | 9049 | 500.00 |
| | | (ಪಿತಾಮಹಿ ಜ್ಞಾಪಕಾರ್ಥ) | |

## ವೃದ್ಧಾಶ್ರಮ ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ.ಎಸ್.ಪ್ರಕಾಶ್ | ಬೆಂಗಳೂರು | 9341 | 10,000.00 |

## ವಿದ್ಯಾರ್ಥಿವೇತನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಇಂದಿರಾ ರಾಮಸ್ವಾಮಿ | ಮುಂಬಯಿ | 9340 | 50,300.00 |
| | | | (ಮಕ್ಕಳ ನೆನಪು) |
| ಬಿ. ಎಸ್. ಪ್ರಕಾಶ್ | ಬೆಂಗಳೂರು | 9342 | 15,000.00 |

## ನವೆಂಬರ್ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 27.10.09 | ಹೆಚ್.ಎಸ್.ರಾಘವನ್ | ಮಾತಾಮಹಿ |
| ಮೈಸೂರು | | ಜಯಲಕ್ಷ್ಮ |
| 01.11.09 | ಲೀಲಾ ಮೂರ್ತಿ ಮತ್ತು | ಅಜ್ಜಿ ಸೀತಮ್ಮ ಮತ್ತು |
| ಬೆಂಗಳೂರು | ನಿರ್ಮಲ ಶಿವಶಂಕರ್ | ತಾಯಿ ಸರೋಜಮ್ಮ |
| 01.11.09 | ಶ್ರೀನಾಥ್ ಬಿ. ಆರ್. | ಹನಸೋಗೆ ಛೇರ್ಮನ್ |
| ಮೈಸೂರು | | ನರಸಿಂಹಯ್ಯ |
| 01.11.09 | ಡಾ॥ ವಿನೋದಾ ಎನ್.ಮೂರ್ತಿ | ತಾಯಿ ಎಸ್.ಲಲಿತಮ್ಮ |
| ಬೆಂಗಳೂರು | | ಅವರ ಹುಟ್ಟುಹಬ್ಬ |
| 02.11.09 | ಪ್ರಭಾವತಿ | ತಂದೆ ಎಸ್.ಎನ್. |
| ಬೆಂಗಳೂರು | | ನಾರಾಯಣಸ್ವಾಮಿ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 02.11.09 ಚೆನ್ನೈ | ರಾಮಚಂದ್ರ ಎಸ್. ಎನ್. | ತಂದೆ ಎಸ್. ಎನ್. ನಾರಾಯಣ ಸ್ವಾಮಿ |
| 02.11.09 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ರಾಮನಾಥ್‌ರವರ ಹುಟ್ಟುಹಬ್ಬ (ಅನುಜ) |
| 02.11.09 ಬೆಂಗಳೂರು | ಶಾಂತಾರಾಮ್ ಹೆಚ್. ಬಿ. | ಸಹೋದರ ಹೆಚ್.ಬಿ. ಸುಬ್ರಹ್ಮಣ್ಯ |
| 03.11.09 ಬೆಂಗಳೂರು | ನಿರ್ಮಲಾ | ಅಜ್ಜಿ ನರ್ಮದಾಬಾಯಿ |
| 04.11.09 ಬೆಂಗಳೂರು | ಮಲ್ಲಿಕಾ ಬಿ.ಎಸ್. | ತಂದೆ ಆವರ್ತಿ ಸೂರ್ಯನಾರಾಯಣಪ್ಪ |
| 07.11.09 ಬೆಂಗಳೂರು | ಚಂಪಕ ಮಾಲಾ ಭಾಸ್ಕರ್ | ಪತಿ ಭಾಸ್ಕರ್ |
| 07.11.09 ಬೆಂಗಳೂರು | ಪಿ ಎನ್ ಜಯರಾಮ್ | ಅಜ್ಜಿ ಪುಟ್ಟತಾಯಮ್ಮ |
| 08.11.09 ಯುಎಸ್‌ಎ | ರಾಮನಾಥ್ ಆರ್. ವಿ. | ತಾಯಿ ಸೀತಮ್ಮ ವೆಂಕಟರಾಮಯ್ಯ |
| 08.11.09 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ತಾಯಿ ಸೀತಮ್ಮ ವೆಂಕಟರಾಮಯ್ಯ |
| 08.11.09 ಬಾಂಬೆ | ಸುಭದ್ರ ವಿ. ಸಾಲಿಗ್ರಾಂ | ಪತಿ ವೆಂಕಟ್ ಕೆ. ಸಾಲಿಗ್ರಾಂ |
| 08.11.09 ಯು.ಎಸ್.ಎ. | ವೈದೇಹಿ ಶಿವಶಂಕರ್ | ಮಗ ರಾಮ ಶಿವಶಂಕರ್ |
| 09.11.09 ಬೆಂಗಳೂರು | ಶ್ರೀಮತಿ ಯಶೋದಮ್ಮ | ಪತಿ ಬಿ. ಮಾರ್ಕಂಡೇಯ |
| 10.11.09 ಬೆಂಗಳೂರು | ಮೂರ್ತಿ ಬಿ.ಜಿ.ಎಸ್. | ತಂದೆ ಬಿ. ಜಿ. ಗೋಪಾಲಯ್ಯ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 11.11.09 ನವದೆಹಲಿ | ರಾಮಸ್ವಾಮಿ ಬಿ. ಎಸ್. ಚಂದ್ರಶೇಖರ್ ಬಿ. ಎಸ್. | ತಾಯಿ ಶಾರದಮ್ಮನವರ ಹುಟ್ಟುಹಬ್ಬ |
| 13.11.09 ಬೆಂಗಳೂರು | ಹೆಚ್.ಎಸ್. ಪುರುಷೋತ್ತಮ್ | ತಾಯಿ ಕೋಳೂರು ಚೆನ್ನಕ್ಕಯ್ಯಮ್ಮ |
| 13.11.09 ಬೆಂಗಳೂರು | ರಾಧಾ ವಿಶ್ವನಾಥ್ | ತಾಯಿ ಸುಬ್ಬಮ್ಮ ಆರ್. ಎಸ್. |
| 14.11.09 | ವಿಶಾಲಿ ಮುತ್ತುಕೃಷ್ಣನ್ | ಅತ್ತೆ ರಾಜಮ್ ವೈದ್ಯನಾಥನ್ |
| 15.11.09 ಬೆಂಗಳೂರು | ಸುಬ್ಬರಾವ್ ಕೆ.ವಿ. ಮತ್ತು ಸರಸ್ವತಮ್ಮ | ತಾಯಿ ಸೀತಾಲಕ್ಷ್ಮಮ್ಮ |
| 15.11.09 ಬೆಂಗಳೂರು | ಆರ್.ಎಸ್.ಆನಂದರಾಮ್ | ತಂದೆ ಆರ್. ವಿ. ಶ್ರೀನಿವಾಸಯ್ಯ |
| 17.11.09 ಬೆಂಗಳೂರು | ಮುರಳಿ ಆರ್. ಕೆ. | ತಂದೆ ಆರ್. ವಿ. ಕೃಷ್ಣಮೂರ್ತಿ |
| 17.11.09 ಬೆಂಗಳೂರು | ರವಿಶಂಕರ್ ಆರ್. ಕೆ. | ತಂದೆ ಆರ್. ವಿ. ಕೃಷ್ಣಮೂರ್ತಿ |
| 17.11.09 ಪುಣೆ | ಸೀತಾರಾಮಯ್ಯ ಆರ್.ವಿ. | ತಾಯಿ ಪುಟ್ಟಮ್ಮ ವೆಂಕಟರಮಣಯ್ಯ |
| 19.11.09 ಬೆಂಗಳೂರು | ಅಭಿಜಿತ್ ಆರ್. ಕೆ. (ಆರ್.ಜಿ.ಕೆ.ಡಿ. ಪ್ರಸಾದ್ ಅವರ ಪುತ್ರ) | ತಾಯಿ ಹೆಚ್. ಸಿ. ನಾಗರತ್ನ |
| 20.11.09 ಬೆಂಗಳೂರು | ಪ್ರಭಾ ಶೇಖರ್ | ತಂದೆ ಆಲೂರು ಸುಬ್ಬರಾವ್ |
| 21.11.09 ದಾವಣಗೆರೆ | ಬಿ. ಟಿ. ಅಚ್ಯುತ ಮತ್ತು ಬಿ. ಟಿ.ಕೃಷ್ಣಮೂರ್ತಿ | ತಾಯಿ ಪಾರ್ವತಮ್ಮ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 21.11.09 ಬೆಂಗಳೂರು | ಕಮಲಾ ಪರಶುರಾಮರಾವ್ | ಸುಭದ್ರಮ್ಮ (ಅತ್ತೆ) |
| 22.11.09 ಬೆಂಗಳೂರು | ಸುಭದ್ರಮ್ಮ | ಪತಿ ಸುಬ್ಬರಾಯರ ಹುಟ್ಟುಹಬ್ಬ |
| 23.11.09 ಬೆಂಗಳೂರು | ಮೀರಾ ರವಿಶಂಕರ್, ಚಂದ್ರಶೇಖರ್ ಸಾಲಿಗ್ರಾಂ | ಅಜ್ಜ ಎಸ್.ಗಂಗಾಧರಯ್ಯ |
| 23.11.09 ಬೆಂಗಳೂರು | ಡಾ॥ ವಿನೋದಾ ಎನ್.ಮೂರ್ತಿ | ಸೋದರಮಾವ ಆರ್.ಎನ್.ರಾಮಸ್ವಾಮಿ |
| 24.11.09 ಬೆಂಗಳೂರು | ಮಾಯಾ ಹೆಚ್.ವಿ. | |
| 27.11.09 ಬೆಂಗಳೂರು | ಪಿ ಎನ್ ಜಯರಾಮ್ | ಅಜ್ಜಿ ಪುಟ್ಟತಾಯಮ್ಮ |
| 27.11.09 ಮೈಸೂರು | ನಾಗರತ್ನ ನಾಗರಾಜ್ ಆರ್. | ವಿವಾಹದ ದಿನ |
| 28.11.09 ಬೆಂಗಳೂರು | ಸದಾಶಿವ. ಎಸ್.ಎಸ್. | ತಂದೆ ಶೀಗವಾಳು ಶಿವರಾಮಯ್ಯ |
| 29.11.09 ಬೆಂಗಳೂರು | ಪೃಥ್ವಿರಾಜ್ | ತಂದೆ ಬಿ.ವಿ.ಸುಬ್ಬರಾವ್ |
| 29.11.09 ಬೆಂಗಳೂರು | ರತ್ನ ಜಯರಾಂ, ಸುನಂದ. ಎಸ್., ಪ್ರಭಾ | ತಂದೆ ಆರ್.ವಿ.ರಾಮಸ್ವಾಮಿ |
| 30.11.09 ದೆಹಲಿ | ಶ್ರೀಮತಿ ಜ್ಯೋತಿ ಶ್ರೀಧರ್ | ತಾಯಿ ನಾಗಲಕ್ಷ್ಮೀ ಆರ್. ಎ. (ಅನಂತ ಮೂರ್ತಿ ಅವರ ಪತ್ನಿ) |
| 30.11.09 ಪುಣೆ | ಸೀತಾರಾಮಯ್ಯ ಆರ್.ವಿ. | ರುದ್ರಪಟ್ಟಣ ಕಾಂತಯ್ಯ ವೆಂಕಟರಮಣಯ್ಯ |
| 30.11.09 ಮಂಡ್ಯ | ಶಾಮಣ್ಣ ಆರ್. ಜಿ. | ತಾಯಿ ತಾಯಮ್ಮ |





## 63ನೇ ಸರ್ವಸದಸ್ಯರ ಸಭೆಯ ವರದಿ

ದಿನಾಂಕ 29.11.2009ರಂದು ನಮ್ಮ ಸಂಘದ 63ನೇ ಸರ್ವ ಸದಸ್ಯರ ಸಭೆಯು ಜಯನಗರದ ಎನ್ಎಂಕೆಆರ್ವಿ ಕಾಲೇಜು ಆವರಣದ ಶಾಶ್ವತೀ ಸಭಾಂಗಣದಲ್ಲಿ ನಡೆಯಿತು.

ಸಮಯಕ್ಕೆ ಸರಿಯಾಗಿ ನಮ್ಮ ಸಂಘದ ಹಿರಿಯ ಸದಸ್ಯರೂ, ವಿದ್ವಾಂಸರೂ ಆದ ಶ್ರೀ ಬಿ. ಎನ್. ಶ್ರೀಕಂಠಯ್ಯನವರು ಸಂಘದ ಅಧ್ಯಕ್ಷರಾದ ಶ್ರೀ ಎಂ. ನರಸಿಂಹನ್ರವರನ್ನು ಅಂದಿನ ಸಭೆಯ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ನಡೆಸಿಕೊಡಬೇಕೆಂದು ಕೇಳಿ ವೇದಿಕೆಗೆ ಆಹ್ವಾನಿಸಿದರು. ಹಾಗೆಯೇ ಕೇಂದ್ರ ಸಮಿತಿಯ ಇತರ ಪದಾಧಿಕಾರಿಗಳನ್ನೂ, ಸಮಿತಿ ಸದಸ್ಯರನ್ನೂ ವೇದಿಕೆಗೆ ಆಹ್ವಾನಿಸಿದರು.

ಚಿ॥ ಎಸ್. ಎಂ. ಪ್ರಮೋದನ ವೇದಘೋಷ, ಶ್ರೀಮತಿಯರಾದ ಸುನಿತಾ, ವನಿತಾ ಸಹೋದರಿಯರಿಂದ ಪ್ರಾರ್ಥನೆಯೊಂದಿಗೆ ಸಭೆಯು ಪ್ರಾರಂಭವಾಯಿತು.

ನಮ್ಮೆಲ್ಲರನ್ನಗಲಿ ದಿವಂಗತರಾಗಿರುವ ನಮ್ಮ ಬಂಧು, ಬಾಂಧವರ ಆತ್ಮಶಾಂತಿಗಾಗಿ ಮೌನ ವಹಿಸಿ ಪ್ರಾರ್ಥಿಸಲಾಯಿತು.

ಸಂಘದ ಉಪಾಧ್ಯಕ್ಷಿಣಿ ಶ್ರೀಮತಿ ಆರ್. ವಿ. ವಸಂತಲಕ್ಷ್ಮೀಯವರು ಸರ್ವರನ್ನೂ ಸ್ವಾಗತಿಸಿದರು.

ಸರ್ವಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲು ಮಾಡಲಾಯಿತು.

2008-2009ರ ವಾರ್ಷಿಕ ವರದಿಯನ್ನು ಕಾರ್ಯದರ್ಶಿ ಶ್ರೀ ಎಸ್. ಸಿ. ಮಂಜುನಾಥ್ರವರು ಓದಿದರು. ಹಿಂದಿನ ಅಂದರೆ 62ನೇ ಸರ್ವಸದಸ್ಯರ ಸಭೆಯಲ್ಲಿ ತೀರ್ಮಾನಿಸಿದಂತೆ, ಮೈಸೂರಿನ ಸಂಘದ ನಿವೇಶನದಲ್ಲಿ, ಸುಸಜ್ಜಿತವಾದ ಸಭಾಂಗಣವನ್ನು ಕಟ್ಟುವ ದಿಶೆಯಲ್ಲಿ ಕಾರ್ಯೋನ್ಮುಖವಾಗಿ, ಸಣ್ಣಪುಟ್ಟ ತೊಡಕುಗಳನ್ನು ನಿವಾರಿಸಿಕೊಳ್ಳುತ್ತಿದ್ದು ಆದಷ್ಟು ಶೀಘ್ರವಾಗಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಾಗಿ ತಿಳಿಸಿದರು. ನಂತರ ಖಜಾಂಚಿ ಶ್ರೀ ಬಿ. ವಿ. ಸತೀಶ್ಚಂದ್ರರವರು 2008-09ರ ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸಿ, ಇದರ ಬಗ್ಗೆ ಚರ್ಚಿಸಿ ಒಪ್ಪಿಗೆ ಸೂಚಿಸುವಂತೆ ಕೋರಿದರು. ಆದರೆ ಚರ್ಚೆಗೆ ಯಾವುದೇ ವಿಷಯವಿಲ್ಲದಕಾರಣ, ಈ ಲೆಕ್ಕ ಪತ್ರಗಳನ್ನು ಒಪ್ಪಿಕೊಳ್ಳಬಹುದೆಂದು ಶ್ರೀ ಹೆಚ್.ವಿ. ಚಂದ್ರಶೇಖರರವರು ಸೂಚಿಸಲಾಗಿ, ಶ್ರೀ ಹೆಚ್.ಆರ್.ಕೆ. ರಾವ್ ಮತ್ತು ಶ್ರೀ ಹೆಚ್.ಆರ್. ಶಿವಸ್ವಾಮಿ ರಾವ್ರವರುಗಳು ಅನುಮೋದಿಸಿದನಂತರ, ಸಭೆಯು ವಾರ್ಷಿಕ ವರದಿಯನ್ನು, ಲೆಕ್ಕಪತ್ರಗಳನ್ನೂ ಸರ್ವಾನುಮತದಿಂದ ಒಪ್ಪಿಕೊಂಡಿತು.

ಸದಸ್ಯರು ಪೂರ್ವಭಾವಿಯಾಗಿ ಯಾವುದೇ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲು ಲಿಖಿತಮೂಲಕ ಕಳುಹಿಸಿರದಕಾರಣ ಮುಂದಿನ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಮಾಜದ, ಹಲವಾರು ಪರೀಕ್ಷೆಗಳಲ್ಲಿ ಅತ್ಯುತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು, ಪ್ರಶಸ್ತಿ ಪತ್ರದೊಂದಿಗೆ ನಗದು ಬಹುಮಾನ ನೀಡಿ ಪುರಸ್ಕರಿಸಲಾಯಿತು.

ಇದಾದನಂತರ ಅಧ್ಯಕ್ಷರ ಅನುಮತಿಯಮೇರೆಗೆ, ಇತರೆ ವಿಷಯಗಳಡಿಯಲ್ಲಿ ಶ್ರೀ ಬಿ. ಆರ್. ನರಸಿಂಹಮೂರ್ತಿಯವರು ಮಾತನಾಡಿ ಅಶಕ್ತ ಮಾಸಾಶನವನ್ನು ರೂ. 200/-ರಿಂದ 400/-ಕ್ಕೂ, ಅಪರಕರ್ಮ ಸಹಾಯವನ್ನು ರೂ. 1000/-ದಿಂದ ರೂ. 2000/-ಕ್ಕೂ ಹೆಚ್ಚಿಸಬೇಕೆಂದು ಹೇಳಿದರು.

ಈ ಮಾತನ್ನು ಅನುಮೋದಿಸಿದ ಶ್ರೀ ಬಿ.ಎನ್.ಶ್ರೀಕಂಠಯ್ಯನವರು ಅಶಕ್ತ ಮಾಸಾಶನವನ್ನು ರೂ. 1000/-ಕ್ಕೆ ಏರಿಸಬೇಕೆಂದರು. ಶ್ರೀಮತಿ ಆರ್.ಕೆ. ಗೀತಾಮಣಿಯವರು ಮಾತನಾಡಿ, ವಾರ್ತಾದ ಬಗ್ಗೆ ಬಹಳಷ್ಟು ಆಕ್ಷೇಪಣೆಗಳಿದ್ದು, ಕೇವಲ ಆಕ್ಷೇಪಣೆಗಳಿಂದಲೇ ಸಮಸ್ಯೆಗಳು ಬಗೆ ಹರಿಯುವುದಿಲ್ಲ. ಆದರೆ ಪ್ರತಿಯೊಬ್ಬರೂ ಮುಕ್ತವಾಗಿ ಸಹಕರಿಸಿದರೆ ಸಮಸ್ಯೆಗಳು ಪರಿಹಾರವಾಗುವುದು ಅಸಾಧ್ಯವಲ್ಲ. ದಯವಿಟ್ಟು ಎಲ್ಲರೂ ಸಹಕರಿಸಬೇಕೆಂದರು. ಶ್ರೀ ಎಂ.ಕೆ.ಸುರೇಶ್‌ರವರು ಬಹಳ ಜನರಿಗೆ ವಾರ್ತಾ ತಲುಪುತ್ತಿಲ್ಲ, ಸಮಿತಿ ಇದರ ಬಗ್ಗೆ ಗಮನಿಸಬೇಕೆಂದರು. ಮುಂದುವರೆದು ತಾವು ಕೊಟ್ಟ ಒಂದು ವಿಷಯವನ್ನು ವಾರ್ತಾದಲ್ಲಿ ಪ್ರಕಟಿಸಿಲ್ಲ ಎಂದು ಸಮಿತಿಯನ್ನು ಆಕ್ಷೇಪಿಸಿದರು. ಹಾಗೆಯೇ ಹಲವಾರು ಆಕ್ಷೇಪಗಳನ್ನು, ಆಧುನಿಕವಾಗಿ ನಿರ್ಮಿಸಬೇಕೆಂದಿರುವ ಸಭಾಂಗಣದ ಬಗ್ಗೆಯೂ ಹೇಳಿದರು. ಹೆಚ್.ವಿ.ಚಂದ್ರಶೇಖರರವರು ಮಾತನಾಡಿ, ಹಿಂದಿನ ಸರ್ವಸದಸ್ಯರ ಸಭೆಯಲ್ಲಿ ನೂತನ ಸಭಾಂಗಣ ಕಟ್ಟುವ ತೀರ್ಮಾನ ಕೈಗೊಂಡಿದ್ದು, ಇಂಥ ಅಭಿವೃದ್ಧಿ ಕಾರ್ಯಕ್ಕೆ ಅಡ್ಡಗಾಲು ಹಾಕುವ ಕೆಲಸ ಮಾಡಬೇಡಿ, ಹೊಸ ಕಟ್ಟಡ ಆಗಲಿ ಎಂದರು. ಶ್ರೀ ಬಿ. ಆರ್. ನರಸಿಂಹಮೂರ್ತಿಯವರೂ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಇದೆಲ್ಲಕ್ಕೂ ಉತ್ತರಿಸಿದ ಅಧ್ಯಕ್ಷರು, ನೀವು ಕೊಟ್ಟಿರುವ ವಿಳಾಸಕ್ಕೆ ನಾವು ವಾರ್ತಾ ಕಳುಹಿಸುತ್ತೇವೆ. ವಾರ್ತಾ ತಲುಪದಿದ್ದರೆ ನಿಮ್ಮ ಅಂಚೆ ಕಛೇರಿಯಲ್ಲಿ ವಿಚಾರಿಸಿ ಎಂದರು. ಕೆಲವರಂತೂ ಬದಲಾದ ವಿಳಾಸವನ್ನೂ ಕೊಡುತ್ತಿಲ್ಲ ಎಂದರು. ಹಾಗೆಯೇ ವಾರ್ತಾಗೆ ಪೋಷಕರಾಗಿ, ಮಹಾಪೋಷಕರಾಗಿ ವಾರ್ತಾವನ್ನು ಬಲಪಡಿಸಿ ಎಂದರು.

ಎಂ.ಕೆ.ಸುರೇಶ್‌ರವರಿಗೆ ಉತ್ತರಿಸುತ್ತಾ, ಸಂಘದ ಹಿತಾಸಕ್ತಿಗೆ ಧಕ್ಕೆ ಬರುವಂಥಾ,





ಸಂಘದ ಸರ್ವಸದಸ್ಯರ ಸಭೆಯ ತೀರ್ಮಾನಗಳನ್ನು ವಿರೋಧಿಸುವ, ಸಂಘ ವಿರೋಧಿ ಚಟುವಟಿಕೆಗಳನ್ನು ವಾರ್ತಾದಲ್ಲಿ ಪ್ರಕಟ ಮಾಡಲಾಗುವುದಿಲ್ಲ ಎಂದರು. ಹಾಗೆಯೇ ಹೊಸ ಸಭಾಂಗಣ ಕಟ್ಟುವ ತೀರ್ಮಾನವಾಗಿದೆ, ಇದನ್ನು ಎಲ್ಲರೂ ಸೇರಿ ಮಾಡೋಣ, ಕೈಜೋಡಿಸಿ, ಇಟ್ಟ ಹೆಜ್ಜೆ ಹಿಂದಕ್ಕೆ ಹೋಗದಂತೆ ಸಲಹೆಗಳು ಪೂರಕವಾಗಿ ಬರಲಿ ಎಂದರು.

ಶ್ರೀಮತಿ ಸುಧಾ ಚಂದ್ರಕಾಂತರವರು ವಾರ್ತಾವನ್ನು ಆಂಗ್ಲ ಭಾಷೆಯಲ್ಲಿ ಮುದ್ರಿಸಿ ಎನ್ನಲಾಗಿ, ಅಧ್ಯಕ್ಷರು, ನಮ್ಮ ಬಂಧುಗಳು ಯಾವ ಭಾಷೆಯಲ್ಲಿ ಲೇಖನಗಳನ್ನು ಕೊಡುವರೋ ಅದೇ ಭಾಷೆಯಲ್ಲಿ ಮುದ್ರಿಸಲಾಗುವುದು, ಇದನ್ನು ಇಂಗ್ಲೀಷಿಗೆ ತರ್ಜುಮೆ ಮಾಡಲಾಗುವುದಿಲ್ಲ, ಕರ್ನಾಟಕದಲ್ಲಿ ಇರುವುದರಿಂದ ಕನ್ನಡ ಕಲಿತರೆ ಒಳಿತು ಎಂದರು.

ನಂತರ ಮಾತನಾಡಿದ ಮಾನ್ಯ ಶ್ರೀ ಬಿ.ಎನ್.ವಿ.ಸುಬ್ರಹ್ಮಣ್ಯರವರು ನಮ್ಮ ಯುವ ಜನಾಂಗ ಸಕ್ರಿಯವಾಗಿ ಸಂಘದ ಆಗುಹೋಗುಗಳಲ್ಲಿ ಪಾಲ್ಗೊಳ್ಳದಿರುವುದು, ಅದರಲ್ಲೂ ಕಾರ್ಯಕಾರಿ ಸಮಿತಿಯ ಚುನಾವಣೆಗೆ ಸ್ಪರ್ಧಿಸದಿರುವುದು ಬಹಳ ನಿರಾಶಾದಾಯಕ ಎಂದರು. ಉಭಯ ಸಂಕೇತಿಗಳೂ ಒಂದಾಗಬೇಕೆಂದು ಕರೆನೀಡಿ, ಇದಾದ ದಿನವೇ ಸುಮಾರು 100 ಕೋಟಿ ಬಂಡವಾಳ ಉಳ್ಳ ನನ್ನ ಜ್ಯೋತಿ ಶಾಲೆ ಮತ್ತು ಜ್ಯೋತಿ ಛಾರಿಟಬಲ್ ಟ್ರಸ್ಟ್ ಅನ್ನು ಸಂಘಕ್ಕೆ ಧಾರೆ ಎರೆಯುತ್ತೇನೆ ಎಂದರು. ಮೈಸೂರಿನಲ್ಲಿ ಹೊಸ ಸಭಾಂಗಣವನ್ನು ಕಟ್ಟಿ ಅಭಿವೃದ್ಧಿಯ ಪಥದಲ್ಲಿ ನಡೆಯಿರಿ ಎಂದರು.

ನಮ್ಮ ವೃದ್ಧಾಶ್ರಮಕ್ಕೆ ಉಭಯ ಸಂಕೇತಿಗಳಿಗೂ ಮುಕ್ತ ಅವಕಾಶವಿರಲಿ ಎಂದರು. ಅಧ್ಯಕ್ಷರು ಮಾತನಾಡಿ, ಮೈಸೂರಿನ ಸಭಾಂಗಣವನ್ನು ಆಧುನಿಕ ರೀತಿಯಲ್ಲಿ ಎಲ್ಲಾ ಕಾನೂನು ತೊಡಕುಗಳನ್ನು ನಿವಾರಿಸಿಕೊಂಡು, ಸಂಘದ ಹಿತಾಸಕ್ತಿಗಳಿಗೆ ಮಾರಕವಾಗದಂತೆ ಕಟ್ಟುತ್ತೇವೆ, ಸಹಕರಿಸಿ ಎಂದರು.

ಹಾಗೆಯೇ ಶ್ರೀ ಬಿ.ಎನ್.ವಿ.ಯವರು ಆಶಿಸಿದಂತೆ, ವೃದ್ಧಾಶ್ರಮಕ್ಕೆ ಉಭಯ ಸಂಕೇತಿಗಳಿಗೂ ಮುಕ್ತವಾಗಿರುವಂತೆ, ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಿ, ಸೂಕ್ತವಾದ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು. ಕಡೆಯದಾಗಿ ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಎಂ. ಆರ್. ಶ್ರೀಕಂಠನ್‌ರವರು ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ವಂದಿಸಿದರು.

ರುಚಿ, ಶುಚಿಯಾದ ಭೋಜನದೊಡನೆ ಕಾರ್ಯಕ್ರಮ ಮುಕ್ತಾಯವಾಯಿತು.

## ತ್ಯಾಗರಾಜ ಆರಾಧನೆ

ಸನ್ಮಾನ್ಯ ಸಂಕೇತಿ ಬಂಧುಗಳೆ,

ಪ್ರತಿವರ್ಷವೂ ನಾವು ಶ್ರೀ ಪುರಂದರ, ಶ್ರೀ ತ್ಯಾಗರಾಜ ಆರಾಧನಾ ಮಹೋತ್ಸವವನ್ನು ನಡೆಸಿಕೊಂಡು ಬರುತ್ತಿರುವುದು ತಮಗೆಲ್ಲಾ ತಿಳಿದೇ ಇದೆ. ನಮ್ಮ ಸಮಾಜದ ಹಲವಾರು ಸಂಗೀತಗಾರರು ವೇದಿಕೆಯಲ್ಲಿ ಸೇರಿ, ಶ್ರೀ ತ್ಯಾಗರಾಜರ ಪಂಚರತ್ನ ಕೀರ್ತನೆಗಳನ್ನು ಹಾಡುವುದು ಕರ್ಣಾನಂದಕರ. ಶ್ರೀರಾಮನ ಸನ್ನಿಧಿಯಲ್ಲಿ ನಡೆಸುವುದರಿಂದ ಪುಣ್ಯದಾಯಕವೂ ಹೌದು.

ಈ ಕಾರ್ಯಕ್ರಮವನ್ನು ಈ ವರ್ಷವೂ ನಮ್ಮ ಸಮಾಜದ ಹೆಸರಾಂತ ಗಾಯಕರಾದ ಶ್ರೀ ಆರ್. ಎನ್. ತ್ಯಾಗರಾಜ ಮತ್ತು ಶ್ರೀ ಆರ್.ಎನ್. ತಾರಾನಾಥನ್‌ರವರ ನೇತೃತ್ವದಲ್ಲಿ ನಡೆಸುವ ತೀರ್ಮಾನವಾಗಿದೆ. ಕಾರ್ಯಕ್ರಮದ ಸಂಪೂರ್ಣ ವಿವರವನ್ನು ಬರುವ ತಿಂಗಳ ವಾರ್ತಾದಲ್ಲಿ ಪ್ರಕಟಿಸಲಾಗುವುದು. ತಾವೆಲ್ಲರೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಭಗವಂತನ ಕೃಪೆಗೆ ಪಾತ್ರರಾಗಬೇಕೆಂದು ನಮ್ಮೆಲ್ಲರ ಆಸೆ.

ಹಾಗೆಯೇ ಈ ಕಾರ್ಯಕ್ರಮಕ್ಕೆ ಸುಮಾರು 20ರಿಂದ 25 ಸಾವಿರ ರೂಗಳವರೆಗೆ ಅಂದಾಜು ಖರ್ಚು ಬರಲಿದೆ. ಬಹಳ ದೊಡ್ಡ ಮೊತ್ತ. ಆದರೆ ತಾವೆಲ್ಲರೂ ಮನಸ್ಸು ಮಾಡಿದರೆ ಇದು ಅತೀ ಚಿಕ್ಕ ಮೊತ್ತವೂ ಆಗಬಹುದು. ಹಾಗಾಗಿ ಈ ಕಾರ್ಯಕ್ರಮಕ್ಕೆ ಪ್ರಾಯೋಜಕರಾಗಲು ನಮ್ಮ ಬಂಧುಗಳು ಮುಂದೆ ಬರಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇವೆ. ಯಾರಿಗೂ ಯಾವುದೇ ನಿರ್ಬಂಧವಿರುವುದಿಲ್ಲ. ನಮ್ಮ ಬಂಧುಗಳು ಅವರವರ ಶಕ್ತ್ಯಾನುಸಾರ ಮೇಲೆ ಹೇಳಿದ ಪೂರ್ಣ ಮೊಬಲಗಾದರೂ ಸರಿ, ಭಾಗಶಃವಾದರೂ ಸರಿ ನಮ್ಮ ಯಾವುದೇ ಸಮಿತಿ ಸದಸ್ಯರ ಮೂಲಕ ಸಲ್ಲಿಸಿ, ಶ್ರೀರಾಮನ ಕೃಪೆಗೆ ಪಾತ್ರರಾಗಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

ಧನ್ಯವಾದಗಳು
ಬಿ. ಆರ್. ನರಸಿಂಹಮೂರ್ತಿ

ನಿಮ್ಮ ತನು, ಮನ, ಧನದ ಮೂಲಕ ಸಹಕರಿಸಿ, ಸಂಘವನ್ನು ಬಲಪಡಿಸಿ





## ಪ್ರತಿಭೆ



**ಚಿ|| ಆರ್. ಶ್ರೀನಿಧಿ ಮುರಳೀ ಕೌಶಿಕ್**

**10ನೇ ತರಗತಿ (ಐಸಿಎಸ್‌ಇ) ಶೇ. 88**

2005-06ನೇ ಕಾರ್ಮಲ್ ಸ್ಕೂಲ್ ''ಇಂಟರ್ ಸ್ಕೂಲ್ ಸ್ಪೋರ್ಟ್ಸ್ ಕಾಂಪಿಟಿಷನ್'' ಹರ್ಡಲ್ಸ್‌ನಲ್ಲಿ ಪ್ರಥಮ ಸ್ಥಾನ

2007-08ರಲ್ಲಿ ನ್ಯಾಷನಲ್ ಎಜುಕೇಷನ್ಸ್ ನಡೆಸಿದ ''ಕಂಪ್ಯೂಟರ್ ಪ್ರೋಗ್ರಾಮಿಂಗ್'' ನಲ್ಲಿ ಪ್ರಥಮ ಸ್ಥಾನ

ಆರ್. ವಿ. ಗರ್ಲ್ಸ್ ಹೈ ಸ್ಕೂಲ್ ನಡೆಸಿದ ಇಂಟರ್ ಹೈಸ್ಕೂಲ್ ಸಂಸ್ಕೃತ-ಸಂಸ್ಕೃತಿ ಕಾಂಪಿಟಿಷನ್ ''ವರ್ಡ್ ಬಿಲ್ಡಿಂಗ್''ನಲ್ಲಿ ಪ್ರಥಮ ಸ್ಥಾನ

2007-08ರಲ್ಲಿ ಪ್ರಜ್ಞಾ ವರ್ಧಿನೀ ಟ್ರಸ್ಟ್(ರಿ.) ನಡೆಸಿದ ''ಕಲ್ಚರಲ್ ಕ್ವಿಜ್ ಕಾಂಪಿಟಿಷನ್'' ನಲ್ಲಿ ಪ್ರಥಮ ಸ್ಥಾನ ಮತ್ತು ''ಸಂಸ್ಕೃತ ಆಶುಭಾಷಣ ಸ್ಪರ್ಧೆ'' ಯಲ್ಲಿ ದ್ವಿತೀಯ ಸ್ಥಾನ

2007-08ರಲ್ಲಿ ಅರುಂಧತೀ ಪಬ್ಲಿಕೇಷನ್ ನಡೆಸಿದ ''ಸಂಸ್ಕೃತ ಪದಂತ್ಯಾಕ್ಷರೀ ಅಂತರ ಶಾಲಾ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ

2007-08ರಲ್ಲಿ ಇಸ್ಕಾನ್ ಫೆಸ್ಟ್ ''ಸಂಸ್ಕೃತ ಅನಂತವಾಕ್ಯ ರಚನಾ ಸ್ಪರ್ಧೆ''ಯಲ್ಲಿ ಪ್ರಥಮ ಸ್ಥಾನ ಹಾಗೂ ''ಇಂಟರ್ ಸ್ಕೂಲ್ ವೇದಿಕ್ ಕ್ವಿಜ್''ನಲ್ಲಿ ಪ್ರಥಮ ಸ್ಥಾನ

2004-05ರಲ್ಲಿ ಕಾರ್ಮಲ್ ಸ್ಕೂಲ್‌ನ ''ಇಂಟರ್ ಸ್ಕೂಲ್ ಕ್ರಿಯೇಟೀವ್ ರೈಟಿಂಗ್ ಕಾಂಪಿಟಿಷನ್''ನಲ್ಲಿ ಪ್ರಥಮ ಸ್ಥಾನ

ಎಸ್.ಐ.ಪಿ. ಅಕಾಡೆಮೀಸ್ ಬ್ರೈನ್ ಜಿಮ್ ಅಂಡ್ ಅಬಾಕಸ್‌ನ 1ರಿಂದ 9ನೇ ಲೆವೆಲ್‌ನಲ್ಲಿ ಪ್ರಥಮ ಸ್ಥಾನ.

ತಂದೆ : ಆರ್. ಕೆ. ಮುರಳಿ

ತಾಯಿ : ಸ್ವರ್ಣಲತಾ

ಅಜ್ಜಂದಿರು : ದಿ|| ಆರ್.ವಿ. ಕೃಷ್ಣಮೂರ್ತಿ ಮತ್ತು ಟಿ.ಎಸ್.ಸತ್ಯನಾರಾಯಣಭಟ್

ಅಜ್ಜಿಯರು : ದಿ|| ಆರ್. ವಿ. ನಾಗಮ್ಮ ಮತ್ತು ಮುಕ್ತಾ ಎಸ್. ಭಟ್

**ಚಿ||ಗೆ ಸಂಘದ ಅಭಿನಂದನೆಗಳು**

## ಯುವ ಪ್ರತಿಭೆ



**ಕು|| ಚಿನ್ಮಯಿ**

ಶ್ರೀ ಚಂದ್ರಶೇಖರ್ ಮತ್ತು ಶ್ರೀಮತಿ ವಿದ್ಯಾಲಕ್ಷ್ಮೀಯವರ ಏಕಮಾತ್ರ ಪುತ್ರಿ ಕು|| ಚಿನ್ಮಯಿ. ಈಗ ಬಿ.ಎಸ್‌ಸಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ಸರಿಗಮಪ ಛಾಲೆಂಜ್ ಎಂಬ ಸಂಗೀತ ಸಮರ ''ಜೀ ಟೀವಿ'' ಕಾರ್ಯಕ್ರಮದಲ್ಲಿ 12 ಸುತ್ತು ಫಲಪ್ರದವಾಗಿ ಪೂರ್ಣಗೊಳಿಸಿದ್ದಾಳೆ.

ಹಿನ್ನೆಲೆ : ಚಿನ್ಮಯಿಯ ಅಜ್ಜ ಸಾಲಿಗ್ರಾಮದ ಚನ್ನಪ್ಪಯ್ಯನವರು ರಾಗ-ಭಾವ ಸಹಿತ ಕಾವ್ಯವಾಚನ ಮಾಡುತ್ತಿದ್ದ ಗಮಕಿ. ಇವಳ ಇನ್ನೊಬ್ಬ ತಾತ ಯೋಗಾಚಾರ್ಯ ಎಚ್.ಎಸ್. ಕೇಶವಮೂರ್ತಿ ಕನ್ನಡ ಸಾಹಿತ್ಯ ಪರಿಷತ್ತಿನ ಗಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕಾವ್ಯವಾಚನ ರೂಢಿಯಲ್ಲಿಟ್ಟುಕೊಂಡಿರುವ ಗಮಕಿ. ಇವರಿಂದ ಯೋಗಾಸನ, ಪ್ರಾಣಾಯಾಮ ಕಲಿತು 2005ರಲ್ಲಿ ರಾಜರಾಜೇಶ್ವರಿ ನಗರದಲ್ಲಿ ಯೋಗ ಶಿಬಿರ ನಡೆಸಿದಳು. ಇವಳ ತಂದೆ ಶ್ರೀ ಎಸ್. ಸಿ. ಚಂದ್ರಶೇಖರ ಗಾಯನ ಸಭಾದಲ್ಲಿ ಪುರಸ್ಕೃತರಾದ ವೈಣಿಕ ವಿದ್ವಾನ್ ಎಚ್. ಎಸ್. ಕೃಷ್ಣಮೂರ್ತಿಗಳಲ್ಲಿ ಹತ್ತಾರು ವರ್ಷ ವೀಣೆ ಅಭ್ಯಾಸ ಮಾಡಿದ್ದಲ್ಲದೆ, ದೇಶಭಕ್ತಿಗೀತೆ, ಭಾವಗೀತೆಗಳನ್ನೂ ರೂಢಿಸಿಕೊಂಡು ಅವರು ಕೆಲಸ ಮಾಡುವ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಲ್ಲಿ ಪ್ರತಿವರ್ಷ ''ಕನ್ನಡ ರಾಜ್ಯೋತ್ಸವವನ್ನು'' ಅತ್ಯಂತ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ. (''ಮಧುರವೀ ಮಂಜುಳಗಾನ'' ಚಂದನ ವಾಹಿನಿಯಲ್ಲಿ ಹಾಡುತ್ತಾರೆ.) ಇವಳ ತಾಯಿ ಶ್ರೀಮತಿ ವಿದ್ಯಾಲಕ್ಷ್ಮೀ ಹೊಳೇನರಸೀಪುರದ ವಿದ್ವಾನ್ ವೆಂಕಟೇಶಯ್ಯನವರ ಬಳಿ ಶಾಸ್ತ್ರೀಯ ಸಂಗೀತದಲ್ಲಿ ಸೀನಿಯರ್‌ವರೆಗೆ ಅಭ್ಯಾಸ ಮಾಡಿ ಶಂಕರಮಠದಲ್ಲಿ ಸಂಗೀತ ಕಛೇರಿಯನ್ನು ನೀಡಿದ್ದಾರೆ.

ಸಂಗೀತಾಭ್ಯಾಸ : ಕು|| ಚಿನ್ಮಯಿ ಸಂಗೀತದಲ್ಲಿ ಪ್ರಾಥಮಿಕ ಅಭ್ಯಾಸವನ್ನು ತಂದೆ-ತಾಯಿಯಿಂದ ಪ್ರಾರಂಭಿಸಿ ಅವರ ಅತ್ತೆಯ ಬಳಿ ಮುಂದುವರಿಸಿದಳು. ವಿದುಷಿ ಸುಮಿತ್ರಾರವರಿಂದ ಪ್ರಾರಂಭವಾದ 'ರಂಗ ಸಮುದ್ರ' ಸುಗಮ ಸಂಗೀತ ತರಗತಿಯಲ್ಲಿ ಮೂರು ವರ್ಷ ಸತತವಾಗಿ ಅಭ್ಯಾಸ ಮಾಡಿದಳು. ಸುಪ್ರಸಿದ್ಧ ರಾಜು ಅನಂತಸ್ವಾಮಿ, ಯಶವಂತ ಹಳಬಂಡಿ ಮುಂತಾದವರಿಂದ ನೂರಾರು ಗೀತೆಗಳನ್ನು ಅಭ್ಯಾಸ ಮಾಡಿ ವಿದುಷಿ ಮಂಜುಳಾ ಗುರುರಾಜ್‌ರವರು ಸ್ಥಾಪಿಸಿರುವ ''ಸಾಧನಾ ಮ್ಯೂಸಿಕ್'' ವಿದ್ಯಾಲಯದಲ್ಲಿ ಮುಂದುವರಿಸುತ್ತಿದ್ದಾಳೆ. ಉಡುಪಿ ಜಿಲ್ಲೆ ಮಣಿಪಾಲದಲ್ಲಿ ಕು|| ಚಿನ್ಮಯಿ ಯಶಸ್ವಿಯಾಗಿ ''ಸುಗಮ ಸಂಗೀತ ಶಿಬಿರ''ವನ್ನು 9 ದಿನಗಳು ನಡೆಸಿದ್ದಾಳೆ. ಆಕಾಶವಾಣಿ ಕಲಾವಿದರೇ ಅಲ್ಲದೆ,





ಕಾಲೇಜು ಉಪನ್ಯಾಸಕಿಯರಾದಿಯಾಗಿ ಇಪ್ಪತ್ತೇಳು ಜನ ಅಭ್ಯರ್ಥಿಗಳಿಗೆ ಹದಿಮೂರು ಗೀತೆಗಳನ್ನು ಅಭ್ಯಾಸ ಮಾಡಿಸಿದಳು. ಶೃಂಗೇರಿಯ ಧ್ಯಾನ ಶಾರದೆಗಾನ, ಶಿವನು ಭಿಕ್ಷೆಗೆ ಬಂದ, ಆಚೆಮನೆ ಸುಬ್ಬಮ್ನೋರ್ದು ಏಕಾದಶಿ ಉಪವಾಸ ಮುಂತಾದ ಗೀತೆಗಳನ್ನು ಹಾಡಿ ಅಭ್ಯಾಸ ಮಾಡಿದ ಅಭ್ಯರ್ಥಿಗಳು ಅನೇಕ ಸಭೆ-ಸಮಾರಂಭಗಳಲ್ಲಿ ಬಹುಮಾನಗಳನ್ನು ಗಳಿಸಿದ್ದಾರೆ.

ಟೀವಿ ಜೊತೆ ನಂಟು : (ಎಫ್.ಎಂ. ಗುರುಕುಲದಲ್ಲಿ ಆಯ್ಕೆ), ಎಫ್.ಎಂ. 94.3ನಲ್ಲಿ ರೇಡಿಯೋಜಾಕಿಯಾಗಿ ಬಿ.ಎಂ.ಎಸ್. ಕಾಲೇಜಿನಿಂದ ಆಯ್ಕೆ. ಜೀ ಟೀವಿಯ ಗುಣಗಾನದಲ್ಲಿ ಭಾಗವಹಿಸಿದ್ದಾಳೆ. ಈಗ ನಡೆಯುತ್ತಿರುವ ಸರಿಗಮಪ ಛಾಲೆಂಜ್ ಸಂಗೀತ ಸಮರದಲ್ಲಿ 'ಮಸ್ತ್' ವಿಭಾಗದಿಂದ ಗುರುಗಳಾದ ಶ್ರೀ ಹೇಮಂತ್‌ಕುಮಾರ್‌ರವರಿಂದ ಮಾರ್ಗದರ್ಶನ ಪಡೆದು 12 ಸಮರಗಳಲ್ಲಿ ಗೆದ್ದು ಮುಂದುವರಿಯುತ್ತಿದ್ದಾಳೆ.

ಸಂಗೀತ ಸಮರದ ವಿಶೇಷತೆ : ಬೇರೆ ಯಾವ ಛಾನಲ್ಲಿನಲ್ಲೂ ಇಲ್ಲದ ವಿಶೇಷ ಕಾರ್ಯಕ್ರಮ ಇಲ್ಲಿದೆ. ಘಟಾನುಘಟಿ ತೀರ್ಪುಗಾರರಿಂದಲೇ 'ಗುರುಕುಲ'ದಲ್ಲಿ ತರಬೇತು ಕೊಡಿಸಿ, ಜೋಶ್ ತುಂಬಿಸಿ, ಹುರಿದುಂಬಿಸಿ ಅಭ್ಯರ್ಥಿಗಳಿಂದ ಹಾಡಿಸುವುದು. ಮೇಲ್ಮಟ್ಟದಲ್ಲಿ ಹಾಡುವವರಿಗೆಲ್ಲಾ ಮನಮೆಚ್ಚುವ ಪಾರಿತೋಷಕ ಕೊಡುವುದು.

### ಸರಿಗಮಪ ಛಾಲೆಂಜ್, ಸಂಗೀತ ಸಮರ

ಜೀ ಟೀವಿಯ ಅಪರೂಪದ ಕಾರ್ಯಕ್ರಮ ಸರಿಗಮಪ ಛಾಲೆಂಜ್, ಬಿಂದಾಸ್, ಧಂ, ಜೋಶ್ ಮತ್ತು ಮಸ್ತ ಎಂಬ ನಾಲ್ಕು ಬೆಟ್ಯಾಲಿಯನ್ ರಚಿಸಿ ಪ್ರತಿಯೊಂದಕ್ಕೂ ಅತ್ಯಂತ ಸಮರ್ಥರಾದ ತೀರ್ಪುಗಾರರನ್ನು ನೇಮಿಸಿದ್ದಾರೆ. ಇದು ರಚನಾತ್ಮಕವಾದ್ದರಿಂದ ಯಾರೂ ಈ ಪದ್ಧತಿಯನ್ನು ಅನುಕರಿಸಬಹುದು. ಅಭ್ಯರ್ಥಿಗಳಿಗೆ ಮೊದಲು ತರಬೇತಿ ಕೊಟ್ಟು ಆನಂತರ ಹಾಡಿಸುವ ಕ್ರಮ ವಿನೂತನವಾದುದು. ಶಾಸ್ತ್ರೋಕ್ತವಾಗಿ, ಇಂಪಾಗಿ ಹಾಡುವವರಿಗೆಲ್ಲಾ ಮನ ಮನಮೆಚ್ಚುವ ಪಾರಿತೋಷಕ ಕೊಟ್ಟು ಪ್ರೋತ್ಸಾಹಿಸುವುದು ಆದರ್ಶವಾಗಿದೆ.

ಜನವರಿ 2010ರವರೆಗೂ ಜೀ ಟೀವಿ ಕನ್ನಡ ವಾಹಿನಿಯಲ್ಲಿ ಪ್ರತಿ ಶನಿವಾರ, ರವಿವಾರ, ಮಂಗಳವಾರ, ಬುಧವಾರ ಹಾಗೂ ಶುಕ್ರವಾರಗಳಂದು ವೀಕ್ಷಿಸಬಹುದು.

## MINDBENDER

**If EELS + MARK + BEST + WARY = EASY**
**What does HELP + BARK + WARD + LEAD equal ?**

**Ans : Hard, using the first letter of the first word, the second letter of the second word etc.**

## ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಟ್ರಸ್ಟ್ (ರಿ.)

**8ನೇ ಆಗಸ್ಟ್ 2009 ರಂದು** ಆ.ವ.ಸಮಾಜದಲ್ಲಿ ಬೆಳಿಗ್ಗೆ 11 ಗಂಟೆಗೆ ಶ್ರೀಮತಿ ವಾಣಿ ಶಂಕರ್ ಅವರಿಂದ ''ಹಬ್ಬ-ಹರಿದಿನ''- ಗಳ ಬಗ್ಗೆ ಒಂದು ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀಮತಿ ವಾಣಿ ಶಂಕರ್ ಅವರು ಬಹಳ ಸರಳವಾಗಿ, ಬಹಳ ವಿಷದವಾಗಿ, ಸುಂದರವಾಗಿ ತಿಳಿಸಿಕೊಟ್ಟಿದ್ದರಿಂದ ಸದಸ್ಯೆಯರೆಲ್ಲಾ ಬಹಳ ಸಂತೋಷಪಟ್ಟರು. ಅಂದಿನ ಆತಿಥೇಯರುಗಳು ಶ್ರೀಮತಿಯರಾದ ಸತ್ಯವತಿ.ರಾ, ಲೀಲ ಶ್ರೀಕಂಠಯ್ಯ, ಲೀಲಾ ನಾಗರಾಜ್, ರುಕ್ಮಿಣಿ, ಮಾಲತಿ.ವಿ, ಲಲಿತಮ್ಮ, ಜಲಜ, ಲತಾಕಶ್ಯಪ್, ಸರಸ್ವತೀ ಕಶ್ಯಪ್, ರತ್ನ ಜಯರಾಮ್, ಸುಧಾ ಚಂದ್ರಕಾಂತ ಅವರುಗಳು.

**ಅಕ್ಟೋಬರ್ 3 ರಂದು** ಗಣಪತಿಹಬ್ಬ ಮತ್ತು ನವರಾತ್ರಿ ಹಬ್ಬದ ಪ್ರಯುಕ್ತ ರಂಗದೊರೈ ಮೆಮೊರಿಯಲ್ ಆಸ್ಪತ್ರೆಯ ಸಹಾಯಾರ್ಥ ಮಾಸಿಕ ಮಿಲನ ಸಭೆ ಏರ್ಪಡಿಸಲಾಗಿತ್ತು.

ಈ ಆಸ್ಪತ್ರೆಯನ್ನು ನಡೆಸುತ್ತಿರುವ ಶಂಕರ ಮಠದವರೇ, ಈ ಕಾರ್ಯಕ್ರಮನಡೆಸಲು ಸ್ಥಳ, ಧ್ವನಿವರ್ಧಕ, ಆಸನಗಳು ಹೀಗೆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟಿದ್ದರು. ಹಾಗಾಗಿ ಈ ಕಾರ್ಯಕ್ರಮವು ಶಾರದಾ ಪ್ರಸಾದ ಕಲ್ಯಾಣ ಮಂಟಪದಲ್ಲಿ ನಡೆಯಿತು.

ಕಾರ್ಯಕ್ರಮವು ಶುಭಾಷಿಣಿ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಟ್ರಸ್ಟಿಯಾದ ಡಾ|| ಸ್ವರ್ಣಗೌರಿಯವರು ಎಲ್ಲರನ್ನೂ ಕಾರ್ಯಕ್ರಮಕ್ಕೆ ಬರಮಾಡಿಕೊಂಡರು. ನಮ್ಮ ಹಿರಿಯ ಸದಸ್ಯೆ ಶ್ರೀಮತಿ ವಸಂತಮಾಲಾ ಅವರು ಗಣಪತಿ ಮತ್ತು ದುರ್ಗೆಗೆ ಪೂಜೆ ಮಾಡಿದರು. ಆ ಸಮಯದಲ್ಲಿ ಎಲ್ಲರೂ ಒಟ್ಟಿಗೆ ಗಣಪತಿಯ ಒಂದು ಶ್ಲೋಕವನ್ನು ಹೇಳಿದರು. ಮಂಗಳಾರತಿಯ ನಂತರ ಟ್ರಸ್ಟಿನ ಕೆಲಸಗಳು ಮತ್ತು ಉದ್ದೇಶಗಳ ಬಗ್ಗೆ ಒಂದು ಮಾಹಿತಿಯನ್ನು ಮ್ಯಾ|| ಟ್ರಸ್ಟೀ ರು. ಕೃ ಗೀತಾಮಣಿಯವರು ನೀಡಿದರು. ರಂಗದೊರೈ ಆಸ್ಪತ್ರೆಯ ಪರವಾಗಿ ಡಾ|| ಲತಾವೆಂಕಟರಾಮನ್‌ರವರು ಮಾತನಾಡಿ, ತಮ್ಮಲ್ಲಿ ಎಲ್ಲಾ ರೀತಿಯ ಟೆಸ್ಟ್‌ಗಳಿಗೂ ಬೇರೆ ಕಡೆಗಳಿಗಿಂತ ಅತ್ಯಂತ ಕಡಿಮೆ ಹಣ ತೆಗೆದುಕೊಳ್ಳಲಾಗುತ್ತಿದೆ ಮತ್ತು ಇಲ್ಲಿ ಕೆಲಸ ಮಾಡುವ ಅನೇಕ ವೈದ್ಯರುಗಳು ಕೇವಲ ಸೇವಾ ಮನೋಭಾವದಿಂದ ಕೆಲಸ ಮಾಡುತ್ತಿದ್ದಾರೆಂದೂ ತಿಳಿಸಿದರು. ಮಾತನ್ನು ಮುಂದುವರಿಸುತ್ತಾ **''ಅಗತ್ಯವಿರುವವರು ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಟ್ರಸ್ಟಿನ ಗುರುತಿನ ಚೀಟಿ ತಂದರೆ ಅವರಿಗೆ ನಿಜವಾಗಿಯೂ ತಮ್ಮಿಂದ ಸಾಧ್ಯವಾಗುವ ವೈದ್ಯಕೀಯ ಸಹಾಯವನ್ನು ಸಂಸ್ಥೆ ಮಾಡುವುದಾಗಿ''** ಆಶ್ವಾಸನೆ ನೀಡಿದರು. ಈ ಮಿಲನ ಸಭೆಯು





ನವರಾತ್ರಿಯನ್ನು ಒಳಗೊಂಡಿದ್ದರಿಂದ ದೇವೀಕೃತಿಗಳನ್ನು ಹಾಡುವುದು ಸೂಕ್ತ ಎಂದು ತಿಳಿದು ರು. ಕೃ ಗೀತಾಮಣಿ ಮತ್ತು ವೃಂದದವರು ದೇವೀಕೃತಿಗಳನ್ನು ಹಾಡಿದರು. ನಂತರ ಎಲ್ಲರಿಗೂ ಎರಡು ಆಟಗಳನ್ನು ಆಡಿಸಲಾಯಿತು. ಕೋಶಾಧಿಕಾರಿ ಶ್ರೀಮತಿ ಗಾಯತ್ರಿಯವರು ಸಭಾ ತಾಂಬೂಲದ ಮೂಲಕ ಟ್ರಸ್ಟಿಗೆ ಬಂದ ಕೊಡುಗೆಗಳನ್ನು ತಿಳಿಸಿ, ಸಂತಸಪಟ್ಟರು. ಆಟಗಳಲ್ಲಿ ಗೆದ್ದವರಿಗೆ ಬಹುಮಾನ ನೀಡಲಾಯಿತು. ಆಸ್ಪತ್ರೆಗಾಗಿ ಎಲ್ಲರಿಂದಲೂ ಸಹಾಯವನ್ನು ಕೋರಲಾಯಿತು. ಬಂದಿದ್ದ ಸದಸ್ಯೆಯರೆಲ್ಲಾ ತಮ್ಮತಮ್ಮ ಇಚ್ಛೆಗನುಗುಣವಾಗಿ ಹಣ ನೀಡಿದರು. **ಅಂದು 7,000 ರೂ. ಸಂಗ್ರಹವಾಯಿತು. ಇದಕ್ಕೆ ಟ್ರಸ್ಟ್ 4,000 ರೂ. ಹಾಕಿ ಒಟ್ಟು 11,000 ರೂ.ಗಳನ್ನು ಆಸ್ಪತ್ರೆಗೆ ನೀಡಲಾಯಿತು.** ಆಸ್ಪತ್ರೆಯ ಸಿಬ್ಬಂದಿಯವರು ಬಹಳ ಸಂತಸಪಟ್ಟರು. ಈ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಎಲ್ಲರಿಗೂ ವಂದಿಸಿದ ನಂತರ ರುಚಿಯಾದ ಪ್ರಸಾದಭೋಜನದ ವ್ಯವಸ್ಥೆಯಾಗಿತ್ತು. ಧಾರ್ಮಿಕತೆಯ ಪ್ರತೀಕವಾದ ಪೂಜೆ, ಸುಶ್ರಾವ್ಯವಾದ ಗಾನಪೂಜೆ ಮುದ ನೀಡಿದ ಸರಳ ಆಟಗಳು, ಖುಷಿ ತಂದಂತಹ ಬಹುಮಾನಗಳು, ನಾಲಿಗೆಯ ರುಚಿಯನ್ನು ತಣಿಸುವ ಸಾಂಪ್ರದಾಯಿಕ ಊಟ, ಅಬ್ಬಾ! ಎಷ್ಟು ಚೆಂದದ ಕಾರ್ಯಕ್ರಮ ಎಂದು ಆಸ್ಪತ್ರೆಯ ಸಿಬ್ಬಂದಿವರ್ಗ ವಿಶೇಷವಾದ ಸಂತಸವನ್ನು ವ್ಯಕ್ತಪಡಿಸಿದರು.

ಆಟಗಳಲ್ಲಿ ಬಹುಮಾನ ಪಡೆದವರ ಪಟ್ಟಿ ಹೀಗಿದೆ.

| ಗುಂಪಿನಾಟ | ನಕ್ಷತ್ರದಾಟ |
|---|---|
| I ರತ್ನ | ಡಾ|| ಲತಾ ವೆಂಕಟರಾಮನ್ (ಚಿನ್ನದ ನಕ್ಷತ್ರ) |
| II ಶಕುಂತಲಾ ಆರ್.ಎಸ್. | ಯಶೋದಮ್ಮ (ಬೆಳ್ಳಿ ನಕ್ಷತ್ರ) |
| III ನಾಗರತ್ನ | ಶುಭಾಷಿಣಿ (ನೀಲಿ ನಕ್ಷತ್ರ) |

ಅಂದಿನ ಆತಿಥೇಯರುಗಳು : ಶ್ರೀಮತಿಯರಾದ ರು. ಕೃ ಗೀತಾಮಣಿ, ಸಾವಿತ್ರಿ, ಜಯಲತಾ, ನಳಿನಿ, ರತ್ನ, ಸುಶೀಲ, ಸರಸ್ವತೀ. ವೆಂ., ಗೀತಾಕೃಪ, ಗೀತಾ ವೆಂ., ಲೀಲಾವತಿ ಎಸ್. ಕೆ., ವಸಂತ ಮಾಲಾ, ಪದ್ಮಿನಿ ಮಂಜುನಾಥ, ವಿಜಯ ಮಂಜುನಾಥ, ಶರಾವತಿ ಆರ್. ಪಿ., ಶಾರದಾ. ಎನ್., ಶಾರದಾ. ಬಿ., ನೇತ್ರಾವತಿ, ಶುಭಾಷಿಣಿ, ಸುಕನ್ಯ, ಆರ್. ಎಸ್. ಶಾಂತಾ, ಆರ್. ಎಸ್. ವತ್ಸಲಾ ಅವರುಗಳು

ರು. ಕೃ ಗೀತಾಮಣಿ
ಮ್ಯಾನೇಜಿಂಗ್ ಟ್ರಸ್ಟೀ
ದೂ : 26695657

## ಶ್ರೀ ಗಣಪತಿ ಮಂಗಳಾರತಿ - ವರದಿ
### ಬೆಂಗಳೂರು ಶಾಖೆ

ದಿನಾಂಕ 19.09.2009ರ ಶನಿವಾರ ಸಂಜೆ 5 ಘಂಟೆಗೆ ಎನ್.ಎಂ.ಕೆ.ಆರ್.ವಿ. ಕಾಲೇಜು, ಜಯನಗರ ಆವರಣದ ಶಾಶ್ವತೀ ಸಭಾಂಗಣದಲ್ಲಿ ಶ್ರೀ ಗಣಪತಿ ಮಂಗಳಾರತಿ ಕಾರ್ಯಕ್ರಮ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಸುಮಾರು 300ಕ್ಕೂ ಮೀರಿ ಸಂಕೇತಿ ಬಂಧುಗಳು ಸೇರಿದ್ದರು. ಕಾರ್ಯಕ್ರಮ ಚಿ|| ಪ್ರಮೋದ್ ವೇದಘೋಷ, ಶ್ರೀ ಎಸ್.ಎನ್. ಶ್ರೀಕಂಠರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಇದಕ್ಕೂ ಮೊದಲು ಆಟದ ಸ್ಪರ್ಧೆಯನ್ನು ಎಲ್ಲ ವಯಸ್ಸಿನವರಿಗೂ ಏರ್ಪಡಿಸಲಾಗಿತ್ತು. ಇದರ ಉಸ್ತುವಾರಿಯನ್ನು ಶಾಖೆಯ ಸದಸ್ಯರಾದ ಶ್ರೀಮತಿ ಆರ್. ಕೆ. ಗೀತಾಮಣಿಯವರು ವಹಿಸಿದ್ದರು.



ಶಾಖೆಯ ಅಧ್ಯಕ್ಷರಾದ ಶ್ರೀ ಆರ್. ಎಸ್. ಶ್ರೀನಿವಾಸಯ್ಯನವರು ಎಲ್ಲರಿಗೂ ಸ್ವಾಗತ ಬಯಸಿದರು. ನಂತರ ಶ್ರೀಮತಿ ಉಷಾ ಹಾಗೂ ಶ್ರೀ ಬಿ. ಎಸ್. ಕೃಷ್ಣಮೂರ್ತಿಯವರ ಪುತ್ರಿಯರಾದ ಕು|| ಶ್ವೇತ ಹಾಗೂ ಕು|| ನೀತಾರವರಿಂದ ಲಕ್ಷ್ಮೀದೇವಿಯನ್ನು ಕುರಿತು ನೃತ್ಯ ನಡೆಯಿತು. ಕು|| ರಮ್ಯಾರವರಿಂದ (ಶ್ರೀ ಎಸ್.ಸಿ. ಆನಂತನಾರಾಯಣರವರ ಪುತ್ರಿ) ಸಂಗೀತ ಕಾರ್ಯಕ್ರಮ ನಡೆಯಿತು.

ಶ್ರೀ ಲೋಕನಾಥ ದೀಕ್ಷಿತ್ ವಿರಚಿತ ''ಪರಂಗಿ ಹುಡುಗಿ'' ಎಂಬ ಹಾಸ್ಯ ನಾಟಕವನ್ನು ಶ್ರೀ ಬಿ. ಎಸ್. ರಾಮಮೂರ್ತಿಯವರ ನಿರ್ದೇಶನದಲ್ಲಿ ನಮ್ಮ ಸಂಕೇತಿ ಬಾಂಧವರಿಂದ ಏರ್ಪಡಿಸಲಾಗಿತ್ತು. ನಾಟಕ ಅತ್ಯುತ್ತಮವಾಗಿ ಪ್ರದರ್ಶನಗೊಂಡು ಎಲ್ಲರ ಪ್ರಶಂಸೆಗೆ ಪಾತ್ರವಾಯಿತು. ತದನಂತರ ಶಾಖೆಯ ಸದಸ್ಯರಾದ ಶ್ರೀ ಬಿ. ವಿ. ಸತೀಶ್‌ಚಂದ್ರರವರು ನಾಟಕದಲ್ಲಿ ಮತ್ತು ಇತರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಎಲ್ಲರಿಗೂ ನೆನಪಿನ ಕಾಣಿಕೆಯನ್ನು ವಿತರಿಸಿದರು. ಆಟದ ಸ್ಪರ್ಧೆಯಲ್ಲಿ ವಿಜೇತರುಗಳಿಗೆ, ಶ್ರೀ ಹೆಚ್.ಆರ್. ಕೃಷ್ಣ ಕುಮಾರ್‌ರವರು ಬಹುಮಾನ ವಿತರಿಸಿದರು. ಶ್ರೀ ಎಸ್. ಸಿ. ಮಂಜುನಾಥ್‌ರವರಿಂದ ವಂದನಾರ್ಪಣೆಯಾಯಿತು. ನಂತರ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಗಣಪತಿ ವಿಸರ್ಜನೆ ನಡೆಯಿತು.





### ಪ್ರಾಯೋಜಕರು

ಶ್ರೀ ಆರ್. ಕೆ. ನಾಗರಾಜ - ಫೋಟೋಗ್ರಾಫ್
ಶ್ರೀ ಶೇಷಾದ್ರಿ ಶೇಖರ್ - ಗಣಪತಿ ವಿಗ್ರಹ
ಬಿ. ವಿ. ಸತೀಶ್‌ಚಂದ್ರ - ನೆನಪಿನ ಕಾಣಿಕೆಗಳು
ಹೆಚ್. ಆರ್. ಕೃಷ್ಣಕುಮಾರ್ - ಬಹುಮಾನಗಳು

ಶಾಖೆಯ ನಾಟಕ ಅಭ್ಯಾಸವನ್ನು ಮಾಡಲು ಸ್ಥಳಾವಕಾಶ ಮಾಡಿಕೊಟ್ಟ ಶ್ರೀ ತೇಜಸ್ವಿನಿ ಟ್ರಸ್ಟಿನ ಆಡಳಿತ ಮಂಡಳಿಯವರಿಗೆ ಸಂಘದ ಪರವಾಗಿ ವಂದನೆಗಳು. ಇದೇರೀತಿ ತಮ್ಮ ಸಹಕಾರ, ಸಹಾಯ, ಅಭಿಮಾನ ಇನ್ನು ಮುಂದೆಯೂ ಸಂಘದ ಮೇಲೆ ಇರಲಿ ಎಂದು ಕೇಳಿಕೊಳ್ಳುತ್ತೇವೆ.

ಇದರಲ್ಲಿ ತನು, ಮನ, ಧನ ಸಹಾಯ ಮಾಡಿದ ಎಲ್ಲಾ ಸಂಕೇತಿ ಬಂಧುಗಳಿಗೂ ವಂದನೆಗಳು.

| | | |
|---|---|---|
| ಆರ್.ಎಸ್.ಶ್ರೀನಿವಾಸಯ್ಯ | ಬಿ.ಆರ್.ನರಸಿಂಹಮೂರ್ತಿ | ಬಿ.ಕೆ.ಸತ್ಯನಾರಾಯಣ |
| ಗೌ|| ಅಧ್ಯಕ್ಷರು | ಗೌ|| ಕಾರ್ಯದರ್ಶಿ | ಗೌ|| ಖಜಾಂಚಿ |

ದೂ : 26711031

### ಪರಂಗಿ ಹುಡುಗಿ ನಾಟಕದ ವಿವಿಧ ದೃಶ್ಯಗಳು























## ಪ್ರಶಸ್ತಿ ಪ್ರದಾನ - ವಿದ್ವಾನ್ ಬಿ. ಜಿ. ಶ್ರೀನಿವಾಸ್‌ರವರಿಗೆ (ಪಾಪು)

ದಿನಾಂಕ 13.10.2009ನೇ ಮಂಗಳವಾರ, ನಯನ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಕ್ಷಕರ ದಿನಾಚರಣೆ, ಗಾಂಧೀ ಜಯಂತಿಯ ಅಂಗವಾಗಿ, ಕರ್ನಾಟಕ ಕಲ್ಚರಲ್ ಅಕಾಡೆಮಿ, ಬೆಂಗಳೂರು ''ರಾಷ್ಟ್ರೀಯ ರತ್ನ ಬಾಪೂಜಿ'' ಪ್ರಶಸ್ತಿಯನ್ನು ನೀಡಿದರು.



ದಿನಾಂಕ 27.11.2009ನೇ ಶುಕ್ರವಾರದಂದು ಬೆಂಗಳೂರಿನ ಪುರಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ, ಜನ ಮನ ಕನ್ನಡ ಸಂಘಟನೆ ಹಾಗೂ ಸಮರ್ಪಣ ಸೇವಾ ಸಂಸ್ಥೆಯವರು ಪ್ರತಿಷ್ಠಿತ ರಾಷ್ಟ್ರಮಟ್ಟದ ''ಭಾರತ ಭೂಷಣ'' ಎಂಬ ಪ್ರಶಸ್ತಿಯನ್ನು ನೀಡಿ ಗೌರವಿಸಿದರು.

ಶ್ರೀಯುತರಿಗೆ ಸಂಘದ ಅಭಿನಂದನೆಗಳು

---

**ಸಂಪರ್ಕಿಸಿ :**

ವಧೂ-ವರರ ವಿವರಣೆಗಳಿಗಾಗಿ ನಮ್ಮ ಬಾಂಧವರು ಶ್ರೀಯುತ ಹೆಚ್.ವಿ. ಮುರಳೀಧರ ಅವರನ್ನು ಸಂಪರ್ಕಿಸಬಹುದು.

**(P. G. Accommodation Available)**

**ದೂರವಾಣಿ : 9242803829, 9341413319**

---

## MINDBENDER

**If you had to swallow one pill every half hour, how much time would it take for you to swallow three pills?**

Ans : One hour - for instance, if you swallowed one at 7, one at 7:30 and one at 8.

## ಬೆಟ್ಟದಪುರ ಸಂಕೇತಿ ಸಂಘ

### ವೃದ್ಧಾಶ್ರಮ ದಾಖಲಾತಿ ಅರ್ಜಿಪತ್ರ
### (ವಯೋಮಿತಿ 60ರಿಂದ 80 ವರ್ಷ)

ಭಾವಚಿತ್ರ

01. ಅರ್ಜಿದಾರರ ಹೆಸರು / ವಯಸ್ಸು :

02. ಹಾಲಿ ಇರುವ ವಿಳಾಸ :

03. ಅರ್ಜಿದಾರರ ಮಕ್ಕಳ ವಿವರ :

(1) ಹೆಸರು :

(2) ವಿಳಾಸ :

(3) ಮಾಸಿಕ ಆದಾಯ :

(4) ದೂರವಾಣಿ :

04. ಅರ್ಜಿದಾರರ ಹತ್ತಿರದ ಸಂಬಂಧಿಗಳ ವಿವರ :

(ಎ) ಹೆಸರು :

(ಬಿ) ಅರ್ಜಿದಾರರೊಡನೆ ಸಂಬಂಧ :

(ಸಿ) ಸ್ಥಳೀಯ ವಿಳಾಸ :

(ಡಿ) ದೂರವಾಣಿ : ಸ್ಥಿರ : ಚರ :

05. ಅರ್ಜಿದಾರರ ಮಾಸಿಕ ಆದಾಯ :

06. ಅರ್ಜಿದಾರರು ವೃದ್ಧಾಶ್ರಮಕ್ಕೆ ಸೇರಲು ಕಾರಣ :

07. ಅರ್ಜಿದಾರರು ಆಶ್ರಮದ ನಿಯಮಾವಳಿಗಳನ್ನು ಓದಿರುವರೆ ?

08. ಹಾಗಿದ್ದರೆ ಈ ನಿಯಮಾವಳಿಗಳನ್ನು ಒಪ್ಪಿರುವರೆ ?

09. ಅರ್ಜಿದಾರರ ಆರೋಗ್ಯದ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಹಾಗೂ ಅವರ ಆಹಾರ ಸೇವನೆಯ ಬಗ್ಗೆ ಪ್ರಮಾಣ ಪತ್ರ

ದಿನಾಂಕ : ಸಹಿ

ಸ್ಥಳ :





## ಬೆಟ್ಟದಪುರ ಸಂಕೇತಿ ಸಂಘ

### ವೃದ್ಧಾಶ್ರಮಕ್ಕೆ ಸೇರಿಸಿಕೊಳ್ಳಲು ನಿಯಮಾವಳಿಗಳು

01. ಅರ್ಜಿದಾರರು ಬೆಟ್ಟದಪುರ ಸಂಕೇತಿಯಾಗಿರಬೇಕು (ಗಂಡ ಅಥವಾ ಹೆಂಡತಿ)

02. ಅರ್ಜಿದಾರರು ಆಶ್ರಮದ ನಿಯಮಾವಳಿಗಳಿಗೆ ಸಂಪೂರ್ಣ ಬದ್ಧರಾಗಿರಬೇಕು.

03. ಅರ್ಜಿದಾರರು ತಮ್ಮ ಕೆಲಸ ಕಾರ್ಯಗಳನ್ನು ತಾವೇ ಮಾಡಿಕೊಳ್ಳುವಷ್ಟು ಆರೋಗ್ಯವಾಗಿರಬೇಕು.

04. ಯಾವುದೇ ಸಂದರ್ಭದಲ್ಲಿ ಅರ್ಜಿದಾರರು ತೀವ್ರ ಅನಾರೋಗ್ಯಪೀಡಿತರಾದರೆ ಅರ್ಜಿದಾರರ ಆಸ್ಪತ್ರೆ ಖರ್ಚು, ವೆಚ್ಚ ಮತ್ತು ಆಸ್ಪತ್ರೆಯಲ್ಲಿರುವಷ್ಟು ದಿನ, ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಅವರ ಪೋಷಕರದೇ ಆಗಿರಬೇಕು.

05. ಆಶ್ರಮದಲ್ಲಿ ಎಲ್ಲರನ್ನೂ ಯಾವುದೇ ತಾರತಮ್ಯವಿಲ್ಲದೇ ಒಂದೇ ರೀತಿಯಲ್ಲಿ ನೋಡಿಕೊಳ್ಳಲಾಗುವುದು. ಯಾರಿಗೂ ಪ್ರತ್ಯೇಕವಾಗಿ ವಿಶೇಷ ಸವಲತ್ತುಗಳನ್ನು ನೀಡಲಾಗುವುದಿಲ್ಲ.

06. ಅರ್ಜಿದಾರರು ಆಶ್ರಮ ಸೇರಿದಮೇಲೆ ಹೊರಗಿನ ಕಾರ್ಯಕ್ರಮಗಳಿಗೆ ಹೋಗುವುದನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಬೇಕು.

07. ಅರ್ಜಿದಾರರು ಡಾಕ್ಟರ್ ಸರ್ಟಿಫಿಕೇಟ್ ಅನ್ನು ಒದಗಿಸಬೇಕು.

08. ಪ್ರವೇಶ ಶುಲ್ಕ ಮತ್ತು ಇತರ ಶುಲ್ಕಗಳ ಬಗ್ಗೆ ಮಾಹಿತಿಯನ್ನು ನಂತರ ನೀಡಲಾಗುವುದು.

## ಶ್ರದ್ಧಾಂಜಲಿ

15.11.09 **ಸುಮಿತ್ರಾ, 57 ವರ್ಷ, ವಾಧೂಲಸ ಗೋತ್ರ**
ಬೆಂಗಳೂರು (ಶ್ರೀ ಹೆಚ್. ಎಸ್. ಅನಂತರಾಮು ಅವರ ಧರ್ಮಪತ್ನಿ)

02.12.09 **ಜಯಲಕ್ಷ್ಮೀ (ಸಣ್ಣಕ್ಕ), 78 ವರ್ಷ, ಕೌಶಿಕ ಗೋತ್ರ**
ಮೈಸೂರು (ಶ್ರೀ ಬೆಳ್ತೂರು ಸುಬ್ಬರಾಯರ ಧರ್ಮಪತ್ನಿ)

**ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.**

## ವೇದ ಸಂಪುಟಗಳು ಲಭ್ಯ

**ಬೆಂಗಳೂರಿನ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಪ್ರಕಾಶನಗೊಳ್ಳುತ್ತಿರುವ ಕೃಷ್ಣಯಜುರ್ವೇದದ 7 ಸಂಪುಟಗಳು ಈಗಾಗಲೇ ಪ್ರಕಟಗೊಂಡಿವೆ. 8ನೇ ಸಂಪುಟ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳವರ ಅಮೃತ ಹಸ್ತದಿಂದ ಬಿಡುಗಡೆಯಾಗಿದೆ. ಇದೂ ಕೂಡ ಈಗ ಲಭ್ಯ. 8 ಸಂಪುಟಗಳ ಒಟ್ಟು ಬೆಲೆ ರೂ. 1725/-.**

**8ನೇ ಸಂಪುಟದ ಬೆಲೆ ರೂ. 250/-.**

**ಪ್ರತಿ ಮನೆಯನ್ನೂ ಬೆಳಗುವ ಈ ಅಪೂರ್ವ ಗ್ರಂಥರಾಶಿಯನ್ನು ಕೊಳ್ಳಲು ಬಯಸುವವರು ಈ ಕೆಳಕಂಡವರನ್ನು ಸಂಪರ್ಕಿಸಲು ಕೋರಿದೆ.**

ಬಿ. ಎನ್. ವಿ. ಸುಬ್ರಹ್ಮಣ್ಯ
ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ
**ನಂ. 31, ಪಂಪ ಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು - 04**
**ದೂರವಾಣಿ : 080 - 2667 7852, 94480 55562**



## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.

*With Best Compliments From :*

**ROTAMACH INDIA**

**C-20, NGEF, Ancillary Estate, Mahadevapura Post,**
**White Field Road, Bangalore - 560 048.**
**Phone : (O) 28524226 / (R) 26784112**

★★★★★★★★★★★★★★

**Prop. S. N. SHIVA SHANKAR**

---

*With Best Compliments From :*

**PRAGATHI ENGINEERS PVT. LTD.**

**Electrical Engineers & Class I Electrical Contractors**

*Specialists in :*
HT & LT & Switch Gears

**No. 237, 9th Cross, 1st 'N' Block,**
**Rajajinagar, Bangalore - 560 010.**
**Phone : 080 - 2357 4212**
**Mobile : 94480 41054, 94480 41466**
**E-mail:murti203@yahoo.com, murti203@hotmail.com**

ಸಂಕೇತಿ ವಾರ್ತಾ

*With Best Compliments From :*

**Savithri Ramesh**
**Certified Handwriting Analyst**

**Change your personality**

*By*

**Changing your Handwriting !**
**Graphotherapy Classes**

*For*

**School Children, College Students,**
**Corporates, Housewives**
**Age No Bar**

**Contact : 9900788954, 080 - 41624114**
Email : saviramesh14@gmail.com

**Come Learn the easiest way**
**to change yourself !**

Res. : # 3973, 17th 'E' Cross, 3rd Main,
BSK 2nd Stage, Bangalore - 560 070

*With Best Compliments From :*

**B. C. SATHYANARAYANA & SONS**

***Builders, Developers***
***&***
***Contractors***

**No. 202, Ganesh Kutir, Station Avenue Road,**
**Chembur, (Opp. Post Office), Mumbai - 71.**
**Phone : 25280702, 25280016**
**Fax : 25280955**

*With Best Compliments From :*

Soumya
PAINTING CONSULTANTS & CONTRACTORS

***H. R. Ravishankar***

**No. 163, 2nd Shop Lane, Tata Silk Farm,**
**Basavanagudi, Bangalore - 560 004**
**Tel : 2676 3434  Mobile : 98450 25877**

ಸಂಕೇತಿ ವಾರ್ತಾ

*With Best Compliments From :*

**Smt. Geetha Krishna**
**Periyapatna**

**Contact for SBI Life Insurance and Postal R. D. Agent**
**No. 114, Sri Ganesha Krupa, Vala Kote,**
**Periyapatna, Mysore District - 571 107**
**Ph : 08223 - 274949, (M) : 9448602038**

ಬೆಟ್ಟದಪುರದ ದಿ॥ ಶ್ರೀ ಬಿ. ಕೆ. ಸುಬ್ರಹ್ಮಣ್ಯರವರ ಧರ್ಮಪತ್ನಿ
ಶ್ರೀಮತಿ ಜಯಲಕ್ಷ್ಮಮ್ಮನವರ ಕುಟುಂಬ

ಶ್ರೀಕ್ಷೇತ್ರ ಮುಗಳೀಕಟ್ಟೆ
ಲಕ್ಷ್ಮೀನರಸಿಂಹ ಸ್ವಾಮಿಯ
ಕೃಪಾಶೀರ್ವಾದಗಳೊಂದಿಗೆ

ಹೆಚ್. ಎಸ್. ವೇಂಕಟನರಸಿಂಹ ಮತ್ತು ಕುಟುಂಬದವರು

*Contact for*

**Netlon imported Mesh, Curtain, Blinds,**
**Electrical Chimney,**
**Kitchen Gas Connection,**
**Solar Water Heaters, Solar Lighting.**

**Loan Facility also made available**

**Ph : 41674847 - Usha Jayaram**

*With Best Compliments From :*

**LOTUS CONTROLS**

*Authorised dealers of :*

**ABB low voltage switchgear, Enercon digital meters & Rallison Domestic & Industrial Cables, AE, Stabilizers & Dimmers**

**Electrical Engineers, Consultants and Class-I Licensed Contractors**

**No. 46/5/5, 1st Floor, 38th Main, Rose Garden,**
**15th Cross, 6th Phase, J. P. Nagar,**
**Bangalore - 560 078**
**Telefax : 26632532, 080-26649258**
**E-mail : elcee94@yahoo.com**

*With Best Compliments From :*

★★★★★

**Annaji Family**

★★★★★

**Phone : 2332 1136 / 2660 6679**
**2357 4212 / 2639 0022 / 2667 7852**

ಸಂಕೇತಿ ವಾರ್ತಾ

*With Best Compliments From :*

**RAVI MANJANATH & CO.**

**HR & Recruitment Consultants**

**No. 62, 3rd Main, 3rd Cross, 1st Block,**
**BSK 3rd Stage, Bangalore - 560 085**
**Ph : 2672 3551, 98442 13526**